

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 08 | Issue : 51 | Friday 31-10-2025 | E-mail : maruti.b.hosamani76@gmail.com | Page: 4 | Price : Rs. 1/-


## ಪುರ ಸಭೆ ನಾಮ ನಿರ್ದೇಶಿತ ಸದಸ್ಯರಿಂದ–ಅಧಿಕಾರ ಸ್ವೀಕಾರ





**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಪಟ್ಟಣದ ಪುರ ಸಭೆಗೆ ಸರ್ಕಾರದಿಂದ ನಾಮ ನಿರ್ದೇಶನದ ಆಧಾರದ ಮೇಲೆ ಆಯ್ಕೆಯಾದ ಐದು ಸದಸ್ಯರು ಇಂದು ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಮಾನ್ವಿ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ ಅವರು ಉಪಸ್ಥಿತರಿದ್ದು, ಸದಸ್ಯರಿಗೆ ಅಭಿನಂದನೆ ಸಲ್ಲಿಸಿದರು.

ನಂತರ ಮಾತನಾಡಿದ ಶಾಸಕರು. “ಪಕ್ಷಮತ್ತುಸರ್ಕಾರನಿಮಗೆಒಂದು ಮಹತ್ವದ ಜವಾಬ್ದಾರಿಯನ್ನು ಕೊಟ್ಟಿದೆ. ಆ ಜವಾಬ್ದಾರಿಯನ್ನು ಅರಿತು, ಚುನಾಯಿತ ಜನ ಪ್ರತಿನಿಧಿಗಳ ಜೊತೆಗೂಡಿ, ಮಾನ್ವಿ ನಗರದ ಅಭಿವೃದ್ಧಿಗೆ ಹಾಗೂ ಬಾಕಿ ಉಳಿದಿರುವ ಕಾಮಗಾರಿಗಳ ಪೂರ್ಣ ಗೊಳಿಸಲು ಸಕ್ರಿಯ ಪಾತ್ರ ವಹಿಸ ಬೇಕು” ಎಂದು ಹೇಳಿದರು.

ಅವರು ಮುಂದುವರಿದು, ಪುರ ಸಭೆಯ ಮುಖ್ಯಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ಮಾನ್ವಿಯ ಸೌಂದರ್ಯೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ನಾಮನಿರ್ದೇಶಿತ ಸದಸ್ಯರಿಗೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಹಂಪಯ್ಯ ನಾಯಕ, ಜಮೀಲ್ ಅಹಮದ್, ಈ. ವಿಜಯಕುಮಾರ, ರೇಣುಕಾ ರೆಡ್ಡಿ ಮತ್ತು ಕಾಮೇಶ ನೂತನ ನಾಮನಿರ್ದೇಶನ ಸದಸ್ಯರಾಗಿ ಶಾಸಕರ ನೇತೃತ್ವದಲ್ಲಿ ಅಧಿಕಾರ ಸ್ವೀಕರಿಸಿದರು.

ಈಸಂದರ್ಭದಲ್ಲಿಪುರಸಭೆಪ್ರಭಾರಿ ಅಧ್ಯಕ್ಷೆ ಮೀನಾಕ್ಷಿ ಡಿ.ರಾಮಕೃಷ್ಣ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನಿ, ನಗರ ಯೋಜನ ಪ್ರಾಧಿಕಾರದ ಅಧ್ಯಕ್ಷ ಅಬ್ದುಲ್ ಗಫೂರ್ ಸಾಬ್, ಪಂಚ ಗ್ಯಾರಂಟಿಗಳ ಅಧ್ಯಕ್ಷ ಬಿ.ಕೆ.ಅಮರೇಶಪ್ಪ, ಪುರಸಭೆ ಸದಸ್ಯರಾದ ಲಕ್ಷ್ಮೀದೇವಿ ನಾಯಕ, ಶೇಖ್ ಫರಿದ್ ಉಮ್ರಿ, ಹೆಚ್.ಪಿ.ಎಂ.ಭಾಷ, ಸುಖಮುನಿ, ಸಾಬಿರ್ ಪಾಷಾ, ಕಾಂಗ್ರೆಸ್ ಪಕ್ಷದ ಮುಖಂಡರಾದ ಸೈಯದ್ ಖಾಲಿದ್ ಖಾದ್ರಿ, ರಾಜಾ ಸುಭಾಷಚಂದ್ರ ನಾಯಕ, ಗಂಗಣ್ಣ ಸಾಹುಕಾರ, ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಪುರಸಭೆ ಸದಸ್ಯರು ಮತ್ತು ಸಿಬ್ಬಂದಿ ವರ್ಗ ಸೇರಿದಂತೆ ನೂತನ ಸದಸ್ಯರಿಗೆ ಅಭಿನಂದಿಸಲು ಆಗಮಿಸಿದ ನೂರಾರು ಜನ ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಶುಕ್ರವಾರ ಮುದ್ದೇಬಿಹಾಳ ಪಟ್ಟಣ ಬಂದ್ ಗೆ – ದಲಿತ ಮುಖಂಡರ ಕರೆ

**ಸಿಹಿ ಕಹಿ ಸುದ್ದಿ,**

**ಬನೋಸಿ:**ಮುದ್ದೇಬಿಹಾಳತಾಲೂಕಿನಬನೋಸಿ ಗ್ರಾಮದಲ್ಲಿ ನಡೆದ ಅಪ್ರಾಪ್ತೆಯಾದ ಬಸಮ್ಮ ಎಂಬ ಯುವತಿಯ ಕ್ರೂರ ಹತ್ಯೆ, ಇತ್ತೀಚಿಗೆ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿ ಬಿ.ಆರ್ ಗವಾಯಿ ಮೇಲೆ ಶೂ ಎಸೆದ ಘಟನೆ ಹಾಗೂ ಮೈಸೂರು ಜಿಲ್ಲೆಯ ಚಾಮರಾಜನಗರದಲ್ಲಿ ಬುದ್ಧ ಮತ್ತು ಅಂಬೇಡ್ಕರ್ ಮೂರ್ತಿಗಳಿಗೆ ಅವಮಾನ ಮಾಡಿದ ಘಟನೆಗಳ ಖಂಡಿಸಿ ಇದೇ ಅಕ್ಟೋಬರ್ 31 ರಂದು ಶುಕ್ರವಾರ ಬೆಳಿಗ್ಗೆ 6:00 ಗಂಟೆಯಿಂದ ಸಂಜೆ 6:00 ಗಂಟೆ ವರೆಗೆ ಮುದ್ದೇಬಿಹಾಳ ಪಟ್ಟಣ ಬಂದು ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ದಲಿತ ಮುಖಂಡರಾದ ಹರೀಶ್ ನಾಟೇಕರ್ ಹೇಳಿದರು. 'ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ದಲಿತ ಪರ ಸಂಘಟನೆಯ ವತಿಯಿಂದ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು, ದೇಶದಾದ್ಯಂತ ನಡೆಯುತ್ತಿರುವ ದಲಿತ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯಗಳು ಆತಂಕಕಾರಿ ಮಟ್ಟ ತಲುಪಿವೆ. ಬನೋಸಿ ಗ್ರಾಮದ ಬಸಮ್ಮ ಹತ್ಯೆ ಪ್ರಕರಣವು ಮಾನವೀಯತೆಗೆ ತಲೆ ತಗ್ಗಿಸುವಂತಹ ಘಟನೆಯಾಗಿದೆ. ಈ ಯುವತಿಯ ಕುಟುಂಬಕ್ಕೆ 50 ಲಕ್ಷ ಪರಿಹಾರ ಸರಕಾರಿ ಹುದ್ದೆಯನ್ನು, ಎರಡು ಎಕರೆ ಜಮೀನನ್ನು ನೀಡಬೇಕು ಎಂದು ನಮ್ಮ ಬೇಡಿಕೆ ಇದೆ.ಈಬೇಡಿಕೆಸಿಗದಿದ್ದರೆಮುಂದಿನದಿನಗಳಲ್ಲಿ ಉಗ್ರವಾದ ಹೋರಾಟ ಮಾಡಲಾಗುವುದು. ನ್ಯಾಯಮೂರ್ತಿ ಗವಾಯಿ ಅವರ ವಿರುದ್ಧ ನಡೆದ ಶೂ ಎಸೆದ ಘಟನೆ ನ್ಯಾಯಾಂಗದ ಗೌರವಕ್ಕೆ ಧಕ್ಕೆ ತರುವಂತದಾಗಿದೆ. ಬುದ್ಧ ಹಾಗೂ ಅಂಬೇಡ್ಕರ್ ಮೂರ್ತಿಗಳಿಗೆ ಅವಮಾನ ಮಾಡಿರುವುದು ಸಂವಿಧಾನದ ತತ್ವಗಳಿಗೆ ವಿರೋಧವಾಗಿದೆ. ಈ ಮೂರು ಘಟನೆಗಳು ಸಮಾಜದ ಶಾಂತಿ, ನ್ಯಾಯ, ಮತ್ತು ಸಮಾನತೆಯ ತತ್ವಗಳ ಮೇಲೆ ದಾಳಿ ಮಾಡಿದಂತಿವೆ. ಆದ್ದರಿಂದ ನಾವು ಎಲ್ಲರೂ ಒಂದಾಗಿ ಮುದ್ದೇಬಿಹಾಳ ಪಟ್ಟಣವನ್ನು ಬಂದು ಮಾಡುವ ನಿರ್ಧಾರ ಕೈಗೊಂಡಿದ್ದೇವೆ. ಈ ಬಂದ್ ಯಾವುದೇ ರಾಜಕೀಯ ಉದ್ದೇಶಕ್ಕಾಗಿ ಅಲ್ಲ, ಇದು 'ಮಾನವೀಯ ಮತ್ತು ಸಾಮಾಜಿಕ ಜಾಗೃತಿಯ ಹೋರಾಟ, ಎಲ್ಲಾ ಪ್ರಗತಿಪರ ಸಂಘಟನೆಗಳು ಸಾಮಾಜಿಕ ಹೋರಾಟಗಾರರುಯುವಕರುವಿದ್ಯಾರ್ಥಿಗಳು ಮತ್ತು ವ್ಯಾಪಾರಸ್ಥರು ಬಂದ್ ಗೆ ಸಹಕರಿಸ ಬೇಕು ಎಂದು ಮನವಿ ಮಾಡಿದರು. ನಂತರ ಪ್ರಕಾಶ್ ಸರೂರ್, ಮಂಜುನಾಥ್ ಕಟ್ಟಿಮನಿ ಅವರು ಮಾತನಾಡಿ"ಬುದ್ಧ ಮತ್ತು ಅಂಬೇಡ್ಕರ್ ಮೂರ್ತಿಗಳಿಗೆ ಅವಮಾನ ಮಾಡಿರುವುದು ಕೇವಲ ಧಾರ್ಮಿಕ ವಿಷಯವಲ್ಲ ಅದು ದಲಿತರ ಆತ್ಮಸ್ಮಮಾನಕ್ಕೆ ಮಾಡಿದ ಹಲ್ಲೆ. ಇಂಥ ಘಟನೆಗಳನ್ನು ತಡೆಯಲು ಯುವ ಜನತೆ ಹೋರಾಟದ ಮುಂಚೂಣಿಯಲಿ ಇರಬೇಕು, " ಎಂದು ಕರೆ ನೀಡಿದರು. ಆನಂದ್ ಮುದುರ್, ಸಂಗಮೇಶ್ ನೇಬಗೇರಿ ಅವರು, " ಬಸಮ್ಮ ಹತ್ಯೆ ಪ್ರಕರಣದಲ್ಲಿ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು, ಸರ್ಕಾರವು ತಕ್ಷಣ ಸಿ.ಬಿ.ಐ ತನಿಖೆ ನಡೆಸಿ ಸತ್ಯಾಂಶವನ್ನು ಬಹಿರಂಗ ಪಡಿಸಬೇಕು, ಇಲ್ಲದಿದ್ದರೆ ರಾಜ್ಯದಾದ್ಯಂತ ಹೋರಾಟ ತೀವ್ರ ಗೊಳಿಸಲಾಗುವುದು "ಎಂದು ಎಚ್ಚರಿಸಿದರು. ಪರಶು ಬಸರಕೋಡ್ ಅವರು ಮಾತನಾಡಿ," ನ್ಯಾಯಮೂರ್ತಿ ಬಿ.ಆರ್ ಗವಾಯಿ ಅವರ ಅಂತಾ ಪ್ರಗತಿಪರ ವ್ಯಕ್ತಿಗಳ ಮೇಲೆ ಶೂ ಎಸೆದ ಘಟನೆ ಪ್ರಜಾಪ್ರಭುತ್ವದ ಅವಮಾನವಾಗಿದೆ. ನಾವು ನ್ಯಾಯಾಂಗ ಗೌರವನ್ನು ಕಾಪಾಡ ಬೇಕು, ಎಂದು ಅಭಿಪ್ರಾಯ ಪಟ್ಟರು. ಈ ಸಂದರ್ಭದಲ್ಲಿ ನಂತರ ಆನಂದ್ ದೇವುರ್, ಪರಸು ಬಸರ–ಕೋಡ್, ಬಲ ಭೀಮ ನಾಯಕ್ ಮಕ್ಕಳ, ಪರಶುರಾಮ ಮುರಾಳ, ಸಿದ್ದು ಚಲವಾದಿ, ರೇವಣಸಿದ್ದ ನಾಯಕ್, ಬಸವರಾಜ್ ಸರೂರ್, ಅಯ್ಯಪ್ಪ ಸಿದ್ದಾಪುರ, ಸೇರಿದಂತೆ ಅನೇಕರು ಹಾಜರಿದ್ದರು.



**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಬಸವರಾಜ.ಸಂಕನಾಳ. ಮುದ್ದೇಬಿಹಾಳ**

## ಸೆನ್ಸಾರ್‌ಗೆ ಸಿದ್ಧವಾದ “ಡೆತ್ ಸರ್ಟಿಫಿಕೇಟ್”





**ಮೈಸೂರು :** ಚಿರು ಮೀಡಿಯಾ ಹೌಸ್ ಮೈಸೂರ ಅವರ ‘ಡೆತ್ ಸರ್ಟಿಫಿಕೆಟ್’ ಚಲನಚಿತ್ರದ ಪೋಸ್ಟ್ ಪ್ರೊಡಕ್ಷನ್ ಕಾರ್ಯ ಮುಗಿಸಿ ಇದೀಗ ಸೆನ್ಸಾರ್ ಗೆ ಹೋಗಲು ಸಿದ್ಧವಾಗಿದೆ.

ಉತ್ತರ ಕರ್ನಾಟಕದ ನೈಜ ಭಾಷೆ, ವಾಸ್ತವಿಕ ಕಥಾಹಂದರ, ಗ್ರಾಮೀಣತೆಯ ಸೊಗಡು, ಮೇಕಪ್ ರಹಿತ ಕಲಾವಿದರು ಮುಂತಾದ ವೈಶಿಷ್ಟ್ಯಗಳಿಂದ ಕೂಡಿರುವ ಈ ಚಿತ್ರದ ಚಿತ್ರೀಕರಣ ಸಂಪೂರ್ಣವಾಗಿ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ವೀರಾಪುರ, ನಾಗೂರ ಗ್ರಾಮಗಳಲ್ಲದೆ ಇನ್ನಿತರ ಸ್ಥಳಗಳಲ್ಲಿ ಒಂದೇ ಹಂತದಲ್ಲಿ ಸತತವಾಗಿ ಚಿತ್ರೀಕರಣ ನಡೆಸಿ ಮುಕ್ತಾಯಗೊಳಿಸಲಾಗಿದೆ. ಉತ್ತರ ಕರ್ನಾಟಕದ ಜನರ ಬದುಕಿನ ನೈಜತೆಯನ್ನು ಇಲ್ಲಿ ಚಿತ್ರೀಕರಿಸಿದ್ದೇನೆ ಎಂದು ನಿರ್ದೇಶಕ ಗುರುದತ್ ಮುಸುರಿ ಹೇಳಿದರು. ಚಿತ್ರೀಕರಣಕ್ಕೆ ವೀರಾಪೂರ ಮತ್ತು ನಾಗೂರ ಗ್ರಾಮಗಳ ಸಮಸ್ತ ಜನತೆ ಸಂಪೂರ್ಣ ಸಹಕಾರ ನೀಡಿದ್ದಾರೆ. ಅವರಿಗೆ ಎಷ್ಟು ಕೃತಜ್ಞತೆ ಹೇಳಿದರೂ ಕಡಿಮೆಯೇ ಎಂದು ಕಥೆಗಾರ ಹುನಗುಂದದ ಮಹಾಂತೇಶ ಹಳ್ಳೂರ ಹೇಳಿದರು.

ಈಗಾಗಲೇ ಬೆಂಗಳೂರಿನ ತಂಡ ಮೂಪ್ವಿ ಮೇಕರ್ಸ್ ಸ್ಟುಡಿಯೋದಲ್ಲಿ ಸಂಪೂರ್ಣ ಪೋಸ್ಟ್‌ಪ್ರೊಡಕ್ಷನ್ ಕಾರ್ಯ ಮುಗಿಸಿದ್ದು ಇದೀಗ ಸೆನ್ಸಾರ್‌ಗೆ ಸಿದ್ಧವಾಗಿದೆ. ನೈಜ ಘಟನೆಯನ್ನು ಕಥೆಯಾಗಿ ಬರೆದ ಮಹಾಂತೇಶ ಹಳ್ಳೂರ ಕಥೆ, ಚಿತ್ರಕಥೆ ಸಂಭಾಷಣೆಯನ್ನು ಬರೆದಿದ್ದಾರೆ. ಛಾಯಾಗ್ರಹಣದ ಜೊತೆ ನಿರ್ದೇಶನದ ಹೊಣೆಯನ್ನು ಗುರುದತ್ತ ಮುಸುರಿ ವಹಿಸಿದ್ದಾರೆ,ಸಂಗೀತ ಅಜಿತ್, ಪತ್ರಿಕಾ ಸಂಪರ್ಕ ಡಾ. ಪ್ರಭು ಗಂಜಿಹಾಳ ಡಾ.ವೀರೇಶ ಹಂಡಿಗಿ, ಸಹನಿರ್ದೇಶನ ಬಸಲಿಂಗಪ್ಪ ತೋಟದ,ಆಕಾಶ ಬೈರನತ್ತ,ಸಹಾಯಕ ನಿರ್ದೇಶನ ಶೇಷಗಿರಿ, ಸಂಕಲನ ಮಲ್ಲಿಕಾರ್ಜುನ, ಪ್ರೊಡಕ್ಷನ್ ಮ್ಯಾನೇಜರ್ ಮಹಾಂತೇಶ ಮಠ, ಚಿತ್ರದ ಸಹ ನಿರ್ಮಾಪಕರುವಸಂತಾ ಹಳ್ಳೂರ ಆಗಿದ್ದಾರೆ.

ತಾರಾಗಣದಲ್ಲಿ ನಾಯಕ ನಟ ಮನ್ವೀತ್, ವಿಜಯಲಕ್ಷ್ಮಿ, ಮಹಾಂತೇಶ ಹಳ್ಳೂರ, ಬಸಲಿಂಗಪ್ಪ ತೋಟದ, ಜಯದೇವ ಗಂಜಿಹಾಳ, ಪ್ರವೀಣ ಭತ್ತದ, ಬಂಡು ಕಟ್ಟಿ, ಡಾ.ಚಂದ್ರನಾಥ ಒಂಟಕುದರಿ, ಮಂಜುಶ್ರೀ ಮಣಿ, ಹನಮಂತ ಮಸ್ಕಿ,ಮಹಾಂತೇಶ ಅಂಗಡಿ,ಮಹಾಂತೇಶ ಮಠ,ಮಹಾಂತೇಶ ಅಗಸಿಮುಂದಿನ, ಮಹಾಂತೇಶ ಅಂಗಡಿ, ನಾಗಪ್ಪ ಪೂಜಾರಿ, ಚಂದ್ರಶೇಖರ ಶಾಸ್ತ್ರಿ , ಸಂಗು ಮಠ, ಬಸನಗೌಡಾ ಹಿರೇಗೌಡ್ರ,ಮಹಾಂತೇಶ ಗಜೇಂದ್ರಗಡ, ವಿನೋದ ಹೂಗಾರ, ಧವಳಚಂದ ಪವಾರ, ಅನಂತ ಬಬಲೇಶ್ವರ, ಗುಡದೂರಕಲ್ಮಠ, ಗುರು ಮಠ, ಭೀಮರಾವ್ ಹಾಗೂ ವೀರಾಪುರ, ಗ್ರಾಮದ ಸಮಸ್ತ ಜನತೆ ಅಭಿನಯಿಸಿದ್ದಾರೆ. ಸೆನ್ಸಾರ್ ನಿಂದ ಹೊರಬರುತ್ತಿದ್ದಂತೆ ಚಲನಚಿತ್ರವನ್ನು ರಾಜ್ಯಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವದಾಗಿ ಚಿರು ಮೀಡಿಯಾ ಹೌಸ್ ತಿಳಿಸಿದೆ.

**ಡಾ.ಪ್ರಭು ಗಂಜಿಹಾಳ**
**ಮೊ:9448775346**

## ಡಾ. ವಿಷ್ಣುವರ್ಧನ್ ಸ್ಮಾರಕ ಮರು ನಿರ್ಮಾಣಕ್ಕೆ ನಾವೆಲ್ಲರೂ ಕೈಜೋಡಿಸೋಣ : ಶಾಸಕ ಎಸ್.ಟಿ. ಸೋಮಶೇಖರ್

**ಬೆಂಗಳೂರು :** ಕನ್ನಡ ನಾಡಿನ ಸುಸಂಸ್ಕೃತ ಹಾಗೂ ಅಪಾರ ಅಭಿಮಾನಿಗಳನ್ನು ಹೊಂದಿರುವ ಶ್ರೇಷ್ಠ ನಟ ಡಾ. ವಿಷ್ಣುವರ್ಧನ್, ನಾಡಿನ ಸಹಸ್ರಾರು ಅಭಿಮಾನಿಗಳ ಹೃದಯದ ಆರಾಧ್ಯ ದೈವ ಆಗಿರುವ ವಿಷ್ಣುವರ್ಧನ್ ಸರ್ ರವರ ಸ್ಮಾರಕ ನಿರ್ಮಾಣಕ್ಕೆ ಪೂಜೆ ಸಲ್ಲಿಸಿದ ಮರುದಿನವೇ ಕೆಲವು ಕಿಡಿಗೇಡಿಗಳು ಉತ್ತರಹಳ್ಳಿ ರಸ್ತೆಯ ಅವರ ಸ್ಮಾರಕ ಧ್ವಂಸ ಮಾಡಿರುವುದು ಹೇಯ ಹಾಗೂ ಖಂಡನಾರ್ಹ.

ಕನ್ನಡಿಗರೆಲ್ಲರೂ ಒಕ್ಕೊರಲ್ಲಿನಿಂದ ಈ ಕೃತ್ಯವನ್ನು ಖಂಡಿಸುವ ಮೂಲಕ, ವಿಷ್ಣು ಸರ್ ರವರ ಸಾಮಾಜಿಕ ಕಳಕಳಿ ಹಾಗೂ ಧ್ಯೇಯಗಳನ್ನು, ನಾವೆಲ್ಲರೂ ಅವರ ಸ್ಮಾರಕವನ್ನು ಮರು ನಿರ್ಮಾಣ ಮಾಡುವ ಮೂಲಕ ಅವರಿಗೆ ಗೌರವ ಸಲ್ಲಿಸುವ ಅನಿವಾರ್ಯವಿದೆ ಎಂದು ಶಾಸಕ ಎಸ್.ಟಿ ಸೋಮಶೇಖರ್ ಹೇಳಿದರು.

ಕೆಂಗೇರಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದ ವಿಷ್ಣುವರ್ಧನ್ ರವರ75ನೇಅಮೃತಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಕಾರ್ಯಕ್ರಮದಲ್ಲಿ ಕನ್ನಡ ನಾಡು ನುಡಿ ಹಾಗೂ ಸಾಹಿತ್ಯಕ್ಕೆ ಸೇವೆ ಸಲ್ಲಿಸುತ್ತಿರುವ, ಕವಿ ಹಾಗೂ ಸಾಹಿತಿ ಡಾ. ಸತ್ಯಮೂರ್ತಿ ಗೂಗಿ ಅವರನ್ನು ಸೇರಿದಂತೆ ಹಲವು ಸಾಧಕ ಗಣ್ಯರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಚಿತ್ರನಟಿ ಮಧುಬಾಲ, ಸಾಧಕರಾದ ರಾಜೇಗೌಡ,ಶ್ರೀಧರ್, ಹುಸೇನ್ ಸಾಬ್, ಉಪೇಕ್ಷ ಮಂಜುನಾಥ್, ರೇಷ್ಮಾ ಭಾನು, ಅನಿತಾ ಗೌಡ, ಸುಜಾತ ಹಾಜರಿದ್ದರು.

## ಗ್ರಾಮೀಣ ಭಾಗದಲ್ಲಿ ಕಬಡ್ಡಿ ಕ್ರೀಡೆಗೆ ಹೆಚ್ಚಿನ ಆದ್ಯತೆ: ಪ್ರಭುಶ್ರೀ

## ಚಿಮ್ಮಡದಲ್ಲಿ ಬೆಳಗಾವಿ ವಿಭಾಗ ಮಟ್ಟದ ಕಬ್ಬಡ್ಡಿ ಪಂದ್ಯಾವಳಿ

**ಚಿಮ್ಮಡ :** ‘ವಿದ್ಯಾರ್ಥಿಗಳನ್ನು ಸದೃಢವಾಗಿ ಸಿದ್ಧಗೊಳಿಸಲು ಗ್ರಾಮೀಣಭಾಗದಲ್ಲಿಕಬಡ್ಡಿಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಕಬಡ್ಡಿಆಡುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ವ್ಯಾಯಾಮ ದೊರೆಯುತ್ತದೆ’ ಎಂದು ಸ್ಥಳೀಯ ವಿರಕ್ತಮಠದ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದ ಪಿಕೆಪಿಎಸ್ ಸೊಸೈಟಿ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆ, ಜಮಖಂಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಭೂಮಿಕಾಪ್ರೌಢಶಾಲೆವತಿಯಿಂದ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಬೆಳಗಾವಿ ವಿಭಾಗ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಹೊನಲು ಬೆಳಕಿನಕಬಡ್ಡಿಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಾನಸಿಕ ಹಾಗೂ ದೈಹಿಕ ಶಕ್ತಿಯ ಬೆಳವಣಿಗೆಗೆ ಕ್ರೀಡೆ ಸಹಕಾರಿ ಎಂದರು.



ಕವಿತಾ ಸಿದ್ದು ಕೊಣ್ಣೂರ ಮಾತನಾಡಿ, ‘ಕಬಡ್ಡಿ ಕ್ರೀಡೆಯನ್ನು ಉಳಿಸಿ ಬೆಳೆಸಬೇಕು. ಕಬಡ್ಡಿ ಗ್ರಾಮೀಣ ಕ್ರೀಡೆಯಾಗಿದ್ದು, ದೇಶದ ರಾಷ್ಟ್ರೀಯತೆ ಮತ್ತು ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ.

ಕ್ರೀಡೆಯಲ್ಲಿ ಸೋಲು ಗೆಲವು ಮುಖ್ಯವಲ್ಲ. ಕ್ರೀಡಾ ಸ್ಫೂರ್ತಿಯಿಂದ ಪಾಲ್ಗೊಳ್ಳುವುದು ಮುಖ್ಯ’ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಕೆ. ಬಸಣ್ಣವರ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾಧರ ಸಿದ್ದು ಸವದಿ ಮಾತನಾಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಬಂಗಾರೆವ್ವ ಜಾಲಿಕಟ್ಟಿ ಕ್ರೀಡಾ ಧ್ವಜಾರೋಹಣ ಮಾಡಿದರು. ಜನಾರ್ಧನ ಮಹಾರಾಜರು ಯರಗಟ್ಟಿಕರಸಾನಿಧ್ಯವಹಿಸಿದ್ದರು. ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಪದ್ಮಾವತಿ ಭಜಂತ್ರಿ, ಪಿಕೆಪಿ–ಎಸ್ ಅಧ್ಯಕ್ಷ ಚನ್ನಪ್ಪ ಬಿಳ್ಳೂರ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಶಂಕರ ಬಟಕುರ್ಕಿ, ಪ್ರಭು ಪಾಲಭಾಂವಿ, ಬೀರಪ್ಪ ಹಳೆಮನಿ, ಬಸವರಾಜ ಕುಂಚನೂರ, ವಿಜಯಕುಮಾರ ಪೂಜಾರಿ, ಮಹಾಲಿಂಗ ಮಾಯನ್ನವರ, ಅಶೋಕ ಮೋಟಗಿ, ಎಚ್. ಎಸ್. ಮಿರ್ಜಿ,ಮುತ್ತುಧವಳೇಶ್ವರ,ರಾಜು ಬಗನಾಳ, ಬಾಳೇಶ ಬ್ಯಾಕೋಡ, ಆರ್. ಆರ್. ಪಾಟೀಲ, ಪ್ರಭು ಗೋವಿಂದಗೋಳ, ಸಿಆರ್‌ಪಿ ಶ್ರೀಮತಿ ದಾಕ್ಷಾಯಿಣಿ ಮಂಡಿ ಸೇರಿದಂತೆ ಹಲವಾರು ಜನ ಪ್ರಮುಖರು ವೇದಿಕೆಯ ಮೇಲೆ ಆಸೀನರಾಗಿದ್ದರು.

## ಕುಂಬಾರಹಳ್ಳ ಪ್ರೌಢಶಾಲೆ ಜೂಡೋ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ



**ಜಮಖಂಡಿ :** ಇತ್ತೀಚೆಗೆ ಬಾಗಲಕೋಟೆಯಲ್ಲಿ ನಡೆದ ಜಿಲ್ಲಾಮಟ್ಟದ ವೈಯಕ್ತಿಕ ವಿಭಾಗದ ಜೂಡೋ ಸ್ಪರ್ಧೆಯಲ್ಲಿ ಸಮೀಪದ ಕುಂಬಾರಹಳ್ಳ ಪ್ರೌಢ ಶಾಲೆಯ ಇಬ್ಬರು ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳಾದಕರೆಪ್ಪಹೆಗಡೆ60ಕೆಜಿಹಾಗೂನೀಲವ್ವ ಸೊನ್ನದ 52 ಕೆಜಿ ವಿಭಾಗದ ಜೂಡೋ ಸ್ಪರ್ಧೆಯಲ್ಲಿ ಭಾಗವಹಿಸಿ ರಾಜ್ಯಮಟ್ಟಕ್ಕೆ ಆಯ್ಕೆಗೊಂಡಿರುವ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಮುಖ್ಯ ಶಿಕ್ಷಕ ನಾರಾಯಣ ಶಾಸ್ತ್ರಿ, ದೈಹಿಕ ಶಿಕ್ಷಣ ಶಿಕ್ಷಕ ಬಾಹುಬಲಿ ಮುತ್ತೂರ, ಶಿಕ್ಷಕರಾದ ಸಂಜೀವ ಝಾಂಬುರೆ, ಸಂಗಮೇಶ ಉಟಗಿ,

ಚಂದ್ರಕಾಂತ ಪೊಲೀಸ್, ಶಾರದಾ ಮಠ, ಸವಿತಾ ಬೆನಕಟ್ಟಿ, ಆಶಿಫಾಭಾನು ಮೋಮಿನ, ಶಕುಂತಲಾ ಬಿರಾದಾರ ಅಭಿನಂದಿಸಿದ್ದಾರೆ.

# ಬೆಳಗಾವಿ ಜಿಲ್ಲಾ ಸಹಕಾರ ಬ್ಯಾಂಕ ಚುನಾವಣೆಯಲ್ಲಿ ಅಪ್ಪಾಸಾಬ ಕೂಲಿಗುಡೆ ನಿರ್ದೇಶಕರಾಗಿ ಅಯ್ಕೆ



**ಬೆಳಗಾವಿ :** ಪ್ರತಿಷ್ಠಿತ ದಿ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ ಬೆಳಗಾವಿ ರವಿವಾರದಂದು ನಡೆದ ಚುನಾವಣೆಯಲ್ಲಿ ರಾಯಬಾಗ ತಾಲುಕು ಮತಕ್ಷೇತ್ರದಿಂದ ಸ್ಪರ್ಧೆ ಮಾಡಿ ಅಯ್ಕೆಯಾದ ಅಪ್ಪಾಸಾಬ ಕೂಲಿಗುಡೆ ಅವರು ಲೋಕೋಪಯೋಗಿ ಇಲಾಖೆ ಮತ್ತು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಹಾಗೂ ಅರಬಾಂವಿ ಶಾಸಕರಾದ ಬಾಲಚಂದ್ರ ಜಾರಕಿಹೊಳಿ ಅವರ ಸಹಕಾರದಿಂದ ನಿರ್ದೇಶಕರಾಗಿ ಅಯ್ಕೆಯಾದ ಸಮಾಜದ ಹೆಮ್ಮೆಯ ಸಹಕಾರಿ ದುರೀಣರಾದ ಅಪ್ಪಾಸಾಬ ಕುಲಗುಡೆಯವರು ನಿರ್ದೇಶಕರಾಗಿ ವಿಜಯಶಾಲಿಯಾಗಿದ್ದಕ್ಕೆ ಸಮಾಜಕ್ಕೆ ಕೀರ್ತಿ ತಂದಿದ್ದಾರೆ.

ಅಪ್ಪಾಸಾಬ ಕೂಲಿಗುಡೆ ಅವರಿಗೆ ಮಾಳಿ ಮಾಲಗಾರ ಸಮಾಜದ ಮುಖಂಡರು ಅಭಿನಂದನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾಳಿ ಮಾಲಗಾರ ಸಮಾಜದ ರಾಜ್ಯಾಧ್ಯಕ್ಷ ಕಾಡು ಮಾಳಿ.ಮುಖಂಡರಾದ ಸಿ ಬಿ ಕೂಲಿಗೋಡ.ಸದಾಶಿವ ಬುಟಾಳಿ. ನೀಲಪ್ಪ ಕಿವಟಿ. ಸಂಜು ಅಥಣಿ. ಮುರಿಗೆಪ್ಪ ಮಾಲಗಾರ.ಮಾದೇವ ತೆರದಾಳ.ಸದಾಶಿವ ಹೊಸಮನಿ. ಕೃಷ್ಣಾ ಮಾಳಿ.ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಕಲಾವಿದರಿಗೆ ಪ್ರೋತ್ಸಾಹ ನೀಡಿ ಬೆಳೆಸಿರಿ: ಸಿದ್ದು ಕೊಣ್ಣೂರ

**ಚಿಮ್ಮಡ :** ಅವಕಾಶಗಳ ಕೊರತೆಯಿಂದ ಇಂದು ಹಲವಾರು ಪ್ರತಿಭಾವಂತ ಕಲಾವಿದರು ಎಲೆ ಮರೆಯ ಕಾಯಿಯಂತೆ ಬದುಕುತ್ತಿದ್ದು ಅವರಿಗೆ ಸ್ಥಳೀಯರು ಅವಕಾಶ ನೀಡಿ, ಅವರ ಬೆನ್ನುತಟ್ಟಿ ಪ್ರೋತ್ಸಾಹಿಸಿದಲ್ಲಿ ಅವರ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಹೇಳಿದರು.

ಗ್ರಾಮದ ದಸರಾ ದೀಪಾವಳಿ ಹಾಗೂ ರಘುನಾಥಪ್ರಿಯ ಸಾಧು ಮಹಾರಾಜರ ಜಾತ್ರಾ ಮಹೋತ್ಸವದ ನಿಮಿತ್ಯ ಹಾಗೂ ಯಂಗ್ ಸ್ಟಾರ್ ಕಮಿಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ "ಸಂಗೀತ ಸಂಭ್ರಮ-2025 " ರಸಮಂಜರಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಈ ದಿಶೆಯಲ್ಲಿ ಕಲಾವಿದರಿಗೆ ಪ್ರೋತ್ಸಾಹ ನೀಡುವಲ್ಲಿ ಪಕ್ಷಬೇಧ,

ಜಾತಿಬೇಧ ಮಾಡದೆ ವರ್ಷಕ್ಕೆ ಇಂಥ ಹತ್ತಾರು ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕಲಾವಿದ-



ರಿಗೆ ಪ್ರೋತ್ಸಾಹಿಸುವ ಚಿಮ್ಮಡ ಗ್ರಾಮಸ್ಥರ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಮುಖ್ಯ ಅಥಿತಿಯಾಗಿ ಆಗಮಿಸಿದ್ದ ಶಂಕರ ಬಟಕುರ್ಕಿ, ಪಂಡಿತ ಭೋಸಲೆ ಮಾತನಾಡಿದರು.

ಸ್ಥಳೀಯ ವಿರಕ್ತಮಠದ ಪ್ರಭು ಮಹಾಸ್ವಾಮಿಗಳು,ಓಂಕಾರಮಹಾರಾಜರು ಸಾನಿಧ್ಯ ವಹಿಸಿದ್ದರು. ಶಿವಪ್ಪಾ ನಾಗನೂರ, ಪ್ರಕಾಶ ಪಾಟೀಲ, ರಾಜು ಬಗನಾಳ, ನೂರಸಾಬ ನದಾಫ, ಅಶೋಕ ಮೋಟಗಿ, ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷ ಬಸವರಾಜ ರಾಯರ, ತಾಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳ, ಮಹಾಂತೇಶ ಜಾಲಿಕಟ್ಟಿ, ಬಾಲಕೃಷ್ಣ ಮಾಳವಾದಿ, ಗುರುಪಾದ ಉರಭಿನವರ, ಶೌಕತ್ ಪಾಲಭಾಂವಿ, ಸಲೀಮ ಸರಕಾವಸ ಸೇರಿದಂತೆ ಹಲವಾರು ಧುರೀಣರು ವೇದಿಕೆಯ ಮೇಲೆ ಉಪಸ್ಥಿತ-ರಿದ್ದರು.

ಝಿ ಟಿ.ವಿ.ಯ ಕಾಮಿಡಿ ಕಿಲಾಡಿಗಳು ವಿಜೇತ ತಂಡದ ಕಲಾವಿದರಾದ ಮ್ಯುಜಿ-ಕ್ ಮೈಲಾರಿ, ಸರಿಗಮಪ ಖ್ಯಾತಿಯ ಬಾಲ ಗಾಯಕಿ ದಿಯಾ ಹೆಗಡೆ, ಪ್ರಜ್ವಲ್ ಮೂಡಲಗಿ, ಮನು ಸೇರಿದಂತೆ ಹಲವಾರು ಕಲಾವಿದರು ಸಿನಿಮಾ ಹಾಗೂ ಜನಪದ ಗೀತೆಗಳನ್ನು ಹಾಡುವ ಮೂಲಕ ನೆರೆದಿದ್ದ ಸಾವಿರಾರು ಜನ ಪ್ರೇಕ್ಷರಿಗೆ ಮನರಂಜನೆಯ ರಸದೌತಣ ನೀಡಿದರು. ಮಂಗಳೂ-ರಿನ ಹೆಜ್ಜೆನಾದ ತಂಡದಿಂದ ನೃತ್ಯ ಹಾಗೂ ಸಂಗೀತ ಕಾರ್ಯಕ್ರಮ ಎಲ್ಲರ ಗಮನ ಸೆಳೆಯಿತು.

ಈ ಸಂಧರ್ಬದಲ್ಲಿ ಹಲವಾರು ಜನ ಸಾಧಕರನ್ನು ಹಾಗೂ ಸಹಾಯ ಮಾಡಿದವರನ್ನು ಸನ್ಮಾನಿಸಿ ಸತ್ಕ-ರಿಸಲಾಯಿತು. ಶಿಕ್ಷಕ ಪ್ರಕಾಶ ಪೂಜೇರಿ ನಿರೂಪಿಸಿ ವಂದಿಸಿದರು.

# ಹಿರಿಯ ಪತ್ರಕರ್ತ ಗೊಂದಿ ಅವರ ಆರೋಗ್ಯ ವಿಚಾರಣೆ

**ಜಮಖಂಡಿ :** ಇಲ್ಲಿಯ ಹಿರಿಯ ಪತ್ರಕರ್ತ ಮಹಾಲಿಂಗಪ್ಪ ಸಿ. ಗೊಂದಿಯವರ ಆರೋಗ್ಯದ ಬಗ್ಗೆ ಅವರ ನಿವಾಸಕ್ಕೆ ಇತ್ತೀಚೆಗೆ ಭೇಟಿ ನೀಡಿದ ಅಬಕಾರಿ ಸಚಿವ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ವಿಚಾ-ರಿಸಿದರು. ಅವರು ಎಂ.ಸಿ. ಗೊಂದಿಯವರ ಆರೋಗ್ಯ ಸ್ಥಿತಿ ಕುರಿತು ಕುಟುಂಬದವರೊಂದಿಗೆ ಚರ್ಚಿಸಿದರು.

ಗೊಂದಿ ಅವರು ರಾಜಕೀಯ ಮತ್ತು ಪತ್ರಿಕೋದ್ಯಮ ಕ್ಷೇತ್ರದ ದಿಗ್ಗಜರಾಗಿದ್ದು, ಅವರ ಆರೋಗ್ಯ ಬೇಗನೆ ಸುಧಾರಿಸಲಿ ಎಂದು ಹಾರೈಸಿದರು.



ಈ ಸಂದರ್ಭದಲ್ಲಿ ಅಬೂಬಕರ ಕುಡಚಿ, ಸಿದ್ದು ಸೂರ್ಯವಂಶಿ, ಆನಂದ ಗೊಂದಿ, ಜಮಖಂಡಿ ಅರ್ಬನ ಬ್ಯಾಂಕ ನಿರ್ದೇಶಕಿ ವೈಶಾಲಿ ಆನಂದ ಗೊಂದಿ, ನಗರಸಭೆಯನಿವೃತ್ತಪೌರಾಯುಕ್ತ ರಮೇಶ ಸುಣಗಾರ, ಅಶೋಕ ಗೊಂದಿ, ಜೈದೀಪ ಗೊಂದಿ ಹಾಜರಿದ್ದರು.

# ಸೇವಾದಳ ಅಧ್ಯಕ್ಷರಾಗಿ ಮಂಜುನಾಥ ಭಾವಿಕಟ್ಟಿ



**ಮಹಾಲಿಂಗಪುರ :** ಅಖಿಲ ಭಾರತ ಮತ್ತು ಕರ್ನಾಟಕ ರಾಜ್ಯ ಕಾಂಗ್ರೆಸ್ ಸೇವಾದಳ ಅಧ್ಯಕ್ಷರ ಹಾಗೂ ಕೆಪಿಸಿಸಿ ಅಧ್ಯಕ್ಷರ ಅನುಮೋದನೆಯ ಮೇರೆಗೆ ಮಹಾಲಿಂಗಪುರದ ಮಂಜುನಾಥ ಮಲ್ಲಪ್ಪ ಭಾವಿಕಟ್ಟಿ ಅವರನ್ನು ರಬಕವಿ-ಬನಹಟ್ಟಿ-ಮಹಾಲಿಂಗಪುರ ಬ್ಲಾಕ್ ಕಾಂಗ್ರೆಸ್ ಸೇವಾದಳದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಬಾಗಲಕೋಟೆ ಜಿಲ್ಲಾ ಕಾಂಗ್ರೆಸ್ ಸೇವಾದಳದ ಅಧ್ಯಕ್ಷ ಜಯಪ್ರಕಾಶ ಎಸ್. ಉತ್ತೂರ ತಿಳಿಸಿದ್ದಾರೆ.

# ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚೆನ್ನಮ್ಮ ದೇಶದ ಪ್ರಥಮ ಮಹಿಳಾ ಹೋರಾಟಗಾರ್ತಿ

**ಜಮಖಂಡಿ :** ವೀರರಾಣಿ ಕಿತ್ತೂರು ಚೆನ್ನಮ್ಮ ಕರ್ನಾಟಕದ ಇತಿಹಾಸದಲ್ಲಿ ದೇಶದ ಸ್ವಾತಂತ್ರ್ಯ ಹೋರಾಟಗಾರ್ತಿಯರಲ್ಲಿ ಮೊದಲಿಗರು. 1778 ರಲ್ಲಿ ಬೆಳಗಾವಿ ಜಿಲ್ಲೆಯ ಕಾಕತಿಯಲ್ಲಿ ಜನಿಸಿದ ಅವರು, ಬಾಲ್ಯದಲ್ಲಿ ಧೈರ್ಯ, ಪರಾಕ್ರಮ ಮತ್ತು ನ್ಯಾಯ ಬೋಧನೆಗೆ ಹೆಸರಾಗಿದ್ದರೆಂದು ಇತಿಹಾಸ ಸಹಾಯಕ ಪ್ರಾಧ್ಯಾಪಕ ಆರ್. ಎಸ್. ಜಾಧವ ಹೇಳಿದರು.

ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ ಸಭಾ ಭವನದಲ್ಲಿ ಗುರುವಾರ ಸಾಂಸ್ಕೃತಿಕ ವಿಭಾಗ, ಮಹಿಳಾ ಸಬಲೀಕರಣ, ಎನ್.ಎಸ್.ಎಸ್. ಮತ್ತು ಐ.ಕ್ಯೂ.ಎ.ಸಿ. ಸಹಯೋಗದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದತ್ತು ಪುತ್ರ ಶಿವಲಿಂಗಪ್ಪನನ್ನು ಸಂಸ್ಥಾನದ ಉತ್ತರಾಧಿಕಾರಿಯಾಗಿ ಘೋಷಿಸಿದಾಗ, ಬ್ರಿಟಿಷ್ ಸರ್ಕಾರ ಅದಕ್ಕೆ ಅಸಮ್ಮತಿಸಿತು. ಕಿತ್ತೂರಿನ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಪ್ರಯತ್ನಿಸಿತು. ಆದರೆ ಚೆನ್ನಮ್ಮಳು ಬ್ರಿಟಿಷ-ರಿಗೆ ಶರಣಾಗದೇ ತಮ್ಮ ಸಣ್ಣ ಸೇನೆಯೊಂದಿಗೆ ಇಂಗ್ಲಿಷರ ವಿರುದ್ಧ 1824 ರಲ್ಲಿ ಧೈರ್ಯ ಸಾಹಸದಿಂದ ಹೋರಾಡಿದರು. ಆ ಹೋರಾಟದಲ್ಲಿ ಅವರು ಅಸಾಧಾರಣ ಶೌರ್ಯ ಪ್ರದರ್ಶಿಸಿದರು.

ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ನಮ್ಮೆಲ್ಲರಿಗೂ ಸ್ಫೂರ್ತಿಯ ದಿನವಾಗಿದೆ. ಅವರ ಧೈರ್ಯ, ದೇಶಭಕ್ತಿ ಹಾಗೂ ನ್ಯಾಯಪರ



ಹೋರಾಟವನ್ನು ಸ್ಮರಿಸಿ, ನಮ್ಮ ಜೀವನದಲ್ಲಿ ಎಲ್ಲ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆವಹಿಸಿದ್ದ ಪ್ರಾಂಶುಪಾಲೆ ಡಾ.ಸುನಂದಾ ಎಸ್. ಶಿರೂರ ಮಾತನಾಡಿ, ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಕೇವಲ ಇತಿಹಾಸ ಸ್ಮರಿಸುವುದಕ್ಕಾಗಿ ಮಾತ್ರವಲ್ಲ, ಅದರಲ್ಲಿ ಅಡಗಿರುವ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರೇರಣೆಯ ದಿನವಾಗಿದೆ.

ರಾಣಿ ಚೆನ್ನಮ್ಮ ಕೇವಲ ಒಬ್ಬ ಶೂರ ನಾಯಕಿಯಾಗಿರಲಿಲ್ಲ. ಅವರು ಮಹಿಳಾ ಸಶಕ್ತೀಕರಣದ ಪ್ರೇರಕ ಶಕ್ತಿಯಾಗಿದ್ದರು. ಆ ಕಾಲದಲ್ಲಿ ಮಹಿಳೆಯರು ಸಮಾಜದ ಹಿಂದುಳಿದವರಾಗಿದ್ದರೂ ಕೂಡ, ಅವರು ಇಂಗ್ಲಿಷರ ವಿರುದ್ಧ ಹೋರಾಟ ನಡೆಸಿ ಮಹಿಳೆಯರು ಕೇವಲ ಅಡಿಗೆ ಮನೆಯೊಳಗೆ ಮಾತ್ರ ಸೀಮಿತವಲ್ಲ. ಅವರು ದೇಶದ ಭವಿಷ್ಯವನ್ನು ರೂಪಿಸುವ ಶಕ್ತಿವಂತರು ಎಂದು ಸಾಬೀತು ಪಡಿಸಿದರು. ಅವರ ಜೀವನ ಸಮಾನತೆ ಮತ್ತು ಸ್ವಾಭಿಮಾನಕ್ಕಾಗಿ ಹೋರಾಡುವ ಪ್ರತಿಯೊಬ್ಬ ಮಹಿಳೆಗೆ ದಾರಿ ದೀಪವಾಗಿದೆ ಎಂದರು.

ವೇದಿಕೆಯಲ್ಲಿ ಡಾ. ವಿ. ಆರ್. ದಳವಾಯಿ, ಎಸ್. ಕೆ. ಡೆಂಬರೆ, ಎ. ಎಸ್. ಪೂಜಾರಿ, ಡಾ. ಎಸ್. ಎಸ್. ಸಿದ್ದಾಪೂರ, ಆರ್. ಬಿ. ಶಿತೋಳೆ, ಡಾ. ಎಸ್. ಎನ್. ಬಜಂತ್ರಿ, ಡಾ. ಬಿ. ಎನ್. ಜಾಧವ, ಎ. ವೈ. ಕಾಂಬಳೆ, ಶ್ರೀಮತಿ ಶಿವಲೀಲಾ, ಡಾ. ಎಂ. ಎಸ್. ಹಡಪದ, ಎನ್. ಶ್ರೀಮಯಿ, ಸಿ. ವಿ. ಗುಣದಾಳ, ಡಾ. ಎಂ. ಎಂ. ಅಂಬಲಿ, ಡಾ. ಶೀಲಾ ಹಿರೇಮಠ, ಡಾ. ಆಶಾ, ಎಸ್. ಎಲ್. ಮಾದರ, ಆರ್. ಎಲ್. ಚವ್ಹಾಣ, ಡಾ. ಮಹೇಶ ಮಠದ, ಅಂಜನಾ ಚವಜ, ಎಸ್. ಎಂ. ಗುಡಿ, ಸಂತೋಷ ಯಡಹಳ್ಳಿ, ಗಂಗಪ್ಪ ನಾಯಕ ಭಾಗವಹಿಸಿದ್ದರು.

# ಕಿತ್ತೂರು ಚನ್ನಮ್ಮ ಹೋರಾಟಗಾಥೆ ಸ್ಮರಣೆ ಅಗತ್ಯ: ದೊಡ್ಡನಗೌಡ ಪಾಟೀಲ



**ಕುಷ್ಟಗಿ :** ಅಪ್ರತಿಮ ಹೋರಾಟಗಾರ್ತಿಯಾಗಿದ್ದ ರಾಣಿ ಚನ್ನಮ್ಮ ಕಿತ್ತೂರು ಸಂಸ್ಥಾನ ಮತ್ತು ಪ್ರಜೆಗಳ ರಕ್ಷಣೆಗೆ ನಡೆಸಿದ ಹೋರಾಟ, ಮಾಡಿದ ತ್ಯಾಗವನ್ನು ಪ್ರಸ್ತುತ ಸಮಾಜ ಸ್ಮರಿಸಬೇಕಿದೆ ಎಂದು ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ತಾಲ್ಲೂಕು ಆಡಳಿತದ ವತಿಯಿಂದ ತಹಶೀಲ್ದಾರ್ ಕಚೇರಿಯಲ್ಲಿ ಏರ್ಪಡಿಸಿದ್ದ ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಚನ್ನಮ್ಮಳ ಧೈರ್ಯ, ಸಾಹಸ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೇ ಉಳಿದಿದೆ. ಮಹಿಳೆಯಾದರೂ ಸ್ವತಃ ಕತ್ತಿ ಹಿಡಿದು ಬ್ರಿಟಿಷ್ ಸೈನ್ಯದ ವಿರುದ್ಧ ರಣರಂಗದಲ್ಲಿ ಹೋರಾಡಿದ ಚರಿತ್ರೆ ಭವಿಷ್ಯದ ಪೀಳಿಗೆಗೂ ಗೊತ್ತಾಗಬೇಕು. ಕೇವಲ ಜಯಂತಿ ಆಚರಿಸಿದರಷ್ಟೇ ಸಾಲದು. ಚನ್ನಮ್ಮ ಮತ್ತು ಸ್ವಾತಂತ್ರ್ಯ ಹೋರಾಟಗಾರರನ್ನು ಯಾವುದೇ ಒಂದು ಸಮುದಾಯಕ್ಕೆ ಮಾತ್ರ ಸೀಮಿತಗೊಳಿಸದೆ ಅವರ ಆಶಯದಂತೆ ನಮ್ಮ ಬದುಕನ್ನು ರೂಢಿಸಿಕೊಳ್ಳುವುದು ಹೆಚ್ಚು ಪ್ರಸ್ತುತ ಎನಿಸುತ್ತದೆ' ಎಂದರು.

ವಿಶೇಷ ಉಪನ್ಯಾಸ ನೀಡಿದ ಶಿಕ್ಷಕ ಹಾಗೂ ರಾಜ್ಯ ಜಾನಪದ ಅಕಾಡೆಮಿ ಸದಸ್ಯ ಜೀವನಸಾಬ್ ವಾಲಿಕಾರ ಮಾತನಾಡಿ, ಕನ್ನಡದ ನೆಲದಲ್ಲಿ ಬ್ರಿಟಿಷರಿಗೆ ಸೋಲಿನ ರುಚಿ ಉಣಿಸಿದ ರಾಣಿ ಚನ್ನಮ್ಮ ಅವರ ಧೈರ್ಯ, ಶೌರ್ಯ ಮೆಚ್ಚುವಂಥದ್ದು. ಅಷ್ಟೇ ಅಲ್ಲದೆ ದತ್ತುಪುತ್ರನನ್ನು ಪಡೆಯುವುದು ಸೇರಿದಂತೆ ಸಂಸ್ಥಾನಕ್ಕೆ ಸಂಬಂಧಿಸಿದ ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳುವ ಮೊದಲು ಪ್ರಜೆಗಳ

ಅಭಿಪ್ರಾಯವನ್ನೂ ಪಡೆದು ಗೌರವಿಸುವ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಆಗಿನ ಕಾಲದಲ್ಲೇ ತಮ್ಮ ಆಡಳಿತದಲ್ಲಿ ಅಳವಡಿಸಿಕೊಂಡಿದ್ದನ್ನು

ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆ ಮೆಲುಕುಹಾಕಬೇಕಿದೆ' ಎಂದರು.

ದೇವೇಂದ್ರಪ್ಪ ಬಳೂಟಗಿ, ಕೆ.ಮಹೇಶ್, ತಹಶೀಲ್ದಾರ್ ಅಶೋಕ ಶಿಗ್ಗಾಂವಿ ಮಾತನಾಡಿದರು.


ಗ್ರೇಡ್ 2 ತಹಶೀಲ್ದಾರ್ ರಜನಿಕಾಂತ ಕೆಂಗಾರಿ, ಸಿಪಿಐ ಯಶವಂತ ಬಿಸನಳ್ಳಿ, ಪ್ರಮುಖರಾದ ಶಿವಸಂಗಪ್ಪ ಬಿಜಕಲ್, ನಾಗಪ್ಪ ಬಿಳಿಯಪ್ಪನವರ, ವಕೀಲರಾದ ದೊಡ್ಡನಗೌಡ, ಎಸ್.ಜಿ.ಪಾಟೀಲ ಇದ್ದರು. ತಾಲ್ಲೂಕು ಪಂಚಮಸಾಲಿ ಸಮುದಾಯದ ಪ್ರಮುಖರು, ಯುವಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಬಿಆರ್‌ಪಿ ಶ್ರೀಕಾಂತ ಬೆಟಗೇರಿ ನಿರೂಪಿಸಿದರು.

ಅದೇ ರೀತಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ, ಶಾಲೆ ಕಾಲೇಜುಗಳಲ್ಲಿ ಹಾಗೂ ಸರ್ಕಾರದ ಎಲ್ಲ ಕಚೇರಿಗಳಲ್ಲಿಯೂ ಕಿತ್ತೂರು ಚನ್ನಮ್ಮ ಜಯಂತಿ ಆಚರಿಸಲಾಯಿತು.

# ವ್ಯಕ್ತಿ ಕಾಣೆ: ಪತ್ತೆಗೆ ಸಹಕರಿಸಲು ಮನವಿ

**ಕೊಪ್ಪಳ :** ಕಾರಟಗಿ ಪಟ್ಟಣದ ನಿವಾಸಿ 45 ವರ್ಷದ ಅಮರೇಶಯ್ಯ ತಂ. ರುದ್ರಯ್ಯಸ್ವಾಮಿ ಎಂಬ ವ್ಯಕ್ತಿ 2023 ರ ಆಗಸ್ಟ್ 28 ರಂದು ಪಟ್ಟಣದ ಸಜ್ಜನ್ ಓಣಿಯಲ್ಲಿರುವ ತಮ್ಮ ಇನ್ನೊಂದು ಮನೆಗೆ ಹೋಗಿ ತಾಯಿಯ ಜೊತೆ ಇರುವುದಾಗಿ ತೆರಳಿದ್ದು, ತಾಯಿ ಮನೆಯಿಂದ 2023ರ ಆಗಸ್ಟ್ 29 ರ ಬೆಳಿಗ್ಗೆ 4.30 ಗಂಟೆಗೆ ಮನೆಯಿಂದ ಹೊರಗೆ ಹೋಗಿದ್ದು, ಇದುವರೆಗೂ ಮರಳಿ ಮನೆಗೆ ಬಾರದೆ ನಾಪತ್ತೆಯಾಗಿದ್ದಾರೆ.

ಈ ಕುರಿತು ಕಾರಟಗಿ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ: 170/2023



ಕಲಂ, ಮನುಷ್ಯ ಕಾಣೆ ಅಡಿ ಪ್ರಕರಣ ದಾಖಲಾಗಿದೆ.

ಕಾಣೆಯಾದ ವ್ಯಕ್ತಿಯ ಚಹರೆ:

ವ್ಯಕ್ತಿಯು 5.8 ಅಡಿ ಎತ್ತರವಿದ್ದು, ದುಂಡು ಮುಖ,

ಗೋಧಿ ಮೈಬಣ್ಣ, ಸದೃಢ ಮೈಕಟ್ಟು ಹೊಂದಿದ್ದು, ತಲೆಯಲ್ಲಿ ಇಂಚು ಕಪ್ಪು ಬಿಳಿ ಮಿಶ್ರಿತ ಕೂದಲು ಹೊಂದಿದ್ದಾರೆ.

ಕಾಣೆಯಾದಾಗ ಬಿಳಿ ಬಣ್ಣದ ಶರ್ಟ್, ನೀಲಿ ಬಣ್ಣದ ಲುಂಗಿ ಮತ್ತು ಕೆಂಪು ಬಣ್ಣದ ಬನಿಯನ್ ಧರಿಸಿದ್ದರು.

ಕನ್ನಡ ಭಾಷೆ ಮಾತ್ರ ಮಾತನಾಡುತ್ತಾರೆ.

ಮೇಲ್ಕಂಡ ಚಹರೆಯ ವ್ಯಕ್ತಿಯ ಬಗ್ಗೆ ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ದೊರೆತಲ್ಲಿ ಕೊಪ್ಪಳ ಪೊಲೀಸ್ ಕಂಟ್ರೋಲ್ ರೂಮ್ ನಂ. 08539-230111, ಕೊಪ್ಪಳ ಜಿಲ್ಲಾ ಪೊಲೀಸ್ ಅಧಿಕ್ಷಕರ ಕಚೇರಿ: 08539-230222, ಗಂಗಾವತಿ ಪೊಲೀಸ್ ಉಪ ವಿಭಾಗಾಧಿಕಾರಿ ಕಚೇರಿ: 08533-230853, ಕಾರಟಗಿ ಠಾಣೆಯ ಆರಕ್ಷಕ ನಿರೀಕ್ಷಕರ ಮೊ.ಸಂ.9480803754 ಮತ್ತು **ದೂ.ಸಂ.:** 08533-275331 ಅಥವಾ **ಇ-ಮೇಲ್**: karatagikpl@ksp.gov.in ಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಕಾರಟಗಿ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಪ್ರಕಟಣೆ ಕೋರಿದ್ದಾರೆ.

# ವಿವಿಧೆಡೆ ಚನ್ನಮ್ಮ ಜಯಂತಿ ಸಂಭ್ರಮ

**ಕನಕಗಿರಿ :** ಪಟ್ಟಣ ಸೇರಿದಂತೆ ತಾಲ್ಲೂಕಿನ ಸರ್ಕಾರಿ ಕಚೇರಿ ಹಾಗೂ ಶಾಲಾ ಕಾಲೇಜು ಮತ್ತು ಪಂಚಮಸಾಲಿ ಸಮಾಜದ ಆಶ್ರಯದಲ್ಲಿ ವೀರ ಮಹಿಳೆ ಕಿತ್ತೂರುರಾಣಿ ಚನ್ನಮ್ಮಅವರಜಯಂತಿಯನ್ನುಗುರುವಾರ ಸಂಭ್ರಮದಿಂದ ಆಚರಿಸಲಾಯಿತು.

ಪಟ್ಟಣದ ಚನ್ನಮ್ಮ ವೃತ್ತದಲ್ಲಿ ನಡೆದ ಜಯಂತಿ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ವಿಶ್ವನಾಥ ಮುರುಡಿ ಮಾತನಾಡಿ, ಚನ್ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಮೊಟ್ಟ ಮೊದಲ ಮಹಿಳೆ. ಅವರ ದಿಟ್ಟ, ಕೆಚ್ಚೆದೆಯ ಹೋರಾಟ ಸ್ಮರಣೀಯ' ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗಂಗಾಧರಸ್ವಾಮಿ ಕಲುಬಾಗಿಲಮಠ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಲಕ್ಷ್ಮಣ ಕಟ್ಟಿಮನಿ, ಸದಸ್ಯರಾದ ಶರಣೆಗೌಡ ಪಾಟೀಲ, ಅನಿಲಕುಮಾರ ಬಿಜ್ಜಳ, ಗಂಗಾಧರ ಚೌಡ್ಕಿ, ಪಂಚಸೈನ್ಯ ತಾಲ್ಲೂಕು ಅಧ್ಯಕ್ಷ ನಾಗರಾಜ



ಭಾವಿಕಟ್ಟಿ, ಸುಳೇಕಲ್ ಗ್ರಾ.ಪಂ ಉಪಾಧ್ಯಕ್ಷ ಶಿವಾನಂದ ವಂಕಲಕುಂಟಿ, ಮಾಜಿ ಸದಸ್ಯ ನಾಗೇಶ ರೊಟ್ಟಿ, ಕೃಷಿ ಪ್ರಾಥಮಿಕ ಪತ್ತಿನ ಸಹಕಾರಿ ಸಂಘದ ಉಪಾಧ್ಯಕ್ಷ ಮಹಾಂತೇಶ ಕೊಡ್ಲಿ, ಪ್ರಮುಖರಾದ ಅನ್ನು ಚಳ್ಳಮರದ, ರವಿ ಪಾಟೀಲ, ಪ್ರಶಾಂತ ತೆಗ್ಗಿನಮನಿ, ಶರಣಬಸವ ಕಲಕೇರಿ, ಮದರಸಾಬ, ನಾಗೇಶ ಬಡಿಗೇರ, ಪಾಮಣ್ಣ ಬಡಿಗೇರ, ನಿಂಗಪ್ಪ ಪೂಜಾರ, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ತಾಲ್ಲೂಕು ಅಧ್ಯಕ್ಷ ಹಜರತಹುಸೇನ ಭಾಗವಹಿಸಿದ್ದರು.

**ಬಿಜೆಪಿ ಕಚೇರಿ:** ಇಲ್ಲಿನ ಬಿಜೆಪಿ ಕಚೇರಿಯಲ್ಲಿ ರಾಣಿಚನ್ನಮ್ಮಜಯಂತಿಆಚರಿಸಲಾಯಿತು. ಮಂಡಲ ಅಧ್ಯಕ್ಷ ಸಣ್ಣ ಕನಕಪ್ಪ, ಮಾಜಿ ಅಧ್ಯಕ್ಷ ಮಹಾಂತೇಶ ಸಜ್ಜನ್, ಪಟ್ಟಣ ಪಂಚಾಯಿತಿ ಸದಸ್ಯರಾದ ಸುರೇಶ ಗುಗ್ಗಳಶೆಟ್ರ, ಹನುಮಂತಪ್ಪ ಬಸರಿಗಿಡದ, ಪ್ರಮುಖರಾದ ಶರಣಪ್ಪ ಭಾವಿಕಟ್ಟಿ ಇದ್ದರು.

ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಧ್ಯಕ್ಷ ಗಂಗಾಧರಸ್ವಾಮಿ

ಕಲ್ಲಬಾಗಿಲಮಠ ಸೇರಿದಂತೆ ಪಕ್ಷದ ಮುಖಂಡರು, ವಿವಿಧ ಘಟಕಗಳ ಅಧ್ಯಕ್ಷರು ಭಾಗವಹಿಸಿದ್ದರು.

ತಹಶೀಲ್ದಾರ್ ಕಚೇರಿ: ಇಲ್ಲಿನ ತಹಶೀಲ್ದಾರ್ ಕಚೇರಿಯಲ್ಲಿ ನಡೆದ ಜಯಂತಿಯಲ್ಲಿ ತಹಶೀಲ್ದಾರ್ ವಿಶ್ವನಾಥ ಮುರುಡಿ, ಶಿರಸ್ತೇದಾರ ಅನಿತಾ ಇಂಡಿ, ನೌಕರರ ಸಂಘದ ತಾಲ್ಲೂಕು ಕೋಶಾಧ್ಯಕ್ಷ ಗುರುಲಿಂಗಯ್ಯ, ಸಿಬ್ಬಂದಿ ಶರಣಬಸವ ಚಳಗೇರಿ, ಅಮರೇಶ ಇದ್ದರು.

ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ನಡೆದ ಚನ್ನಮ್ಮ ಜಯಂತಿಯಲ್ಲಿ ಮುಖ್ಯಾಧಿಕಾರಿ ಲಕ್ಷ್ಮಣ ಕಟ್ಟಿಮನಿ, ಸದಸ್ಯ ಹನುಮಂತಪ್ಪ ಬಸರಿಗಿಡದ, ಅನ್ನು ಚಳ್ಳಮರದ ಇದ್ದರು.

# ತರಬೇತಿಗೆ ಅರ್ಜಿ ಆಹ್ವಾನ

**ಕೊಪ್ಪಳ :** ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ಸಂಸ್ಥೆಯಿಂದ ಉಚಿತವಾಗಿ ಹೊಲಿಗೆ ಮತ್ತು ಬ್ಯೂಟಿ ಪಾರ್ಲರ್ ನಿರ್ವಹಣೆ ತರಬೇತಿಗಳಿಗಾಗಿ ಆಸಕ್ತ ಗ್ರಾಮೀಣ ಭಾಗದ ನಿರುದ್ಯೋಗಿ ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

18ರಿಂದ 50 ವಯೋಮಾನದ ಯುವತಿಯರಿಗೆ ನವೆಂಬರ್‌ನಲ್ಲಿ 35 ದಿನಗಳ ಬ್ಯೂಟಿ ಪಾರ್ಲರ್ ನಿರ್ವಹಣೆ ತರಬೇತಿ ಹಾಗೂ ಮಹಿಳೆಯರಿಗಾಗಿ 31 ದಿನಗಳ ಹೊಲಿಗೆ ತರಬೇತಿ ನೀಡಲಾಗುವುದು. ತರಬೇತಿಯು ಊಟ ಮತ್ತು ವಸತಿಯೊಂದಿಗೆ ಸಂಪೂರ್ಣ ಉಚಿತವಾಗಿ ಇರಲಿದೆ.

ಅರ್ಜಿ ಸಲ್ಲಿಸಲು ಅ.31 ಕೊನೆಯ ದಿನವಾಗಿದ್ದು, ಆಸಕ್ತರು ಪ್ರಶಾಂತ ಬಡ್ಡಿ,

ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ಸಂಸ್ಥೆ,

ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಸಂಪರ್ಕಿಸಲು ಹಾಗೂ ಸಂಸ್ಥೆಯ ವಾಟ್ಸ್‌ಆಯಪ್ 9483485489 ಸಂಖ್ಯೆಗೆ ಹಾಯ್ ಎಂದು ಸಂದೇಶ ಕಳುಹಿಸುವ ಮೂಲಕ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಮಾಹಿತಿಗಾಗಿ ಮೊ: 9482188780 ಅಥವಾ 9632225123 ಸಂಪರ್ಕಿಸಿ.

# ರಮೇಶ್ ಕತ್ತಿ ವಿರುದ್ಧ ಪ್ರತಿಭಟನೆ: ಪಂಜಿನ ಮೆರವಣಿಗೆ

**ಕೊಪ್ಪಳ :** ವಾಲ್ಮೀಕಿ ಸಮುದಾಯದ ಬಗ್ಗೆ ಮಾಜಿ ಸಂಸದ ರಮೇಶ ಕತ್ತಿ ಅವಹೇಳನಕಾರಿಯಾಗಿ ಹೇಳಿಕೆ ನೀಡಿದ್ದು, ಅವರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿ ಗುರುವಾರ ರಾತ್ರಿ ಜಿಲ್ಲಾ ವಾಲ್ಮೀಕಿ ಮಹಾಸಭಾದ ಪ್ರಮುಖರು ನಗರದಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ಮಳೆಯ ನಡುವೆಯೂ ಪ್ರತಿಭಟನೆ ನಡೆಯಿತು.

ವಾಲ್ಮೀಕಿಭವನದಿಂದಅಶೋಕವೃತ್ತದತನಕ ಮೆರವಣಿಗೆ ನಡೆಸಿದ ಬಳಿಕ ಮಾತನಾಡಿದ ಸಮುದಾಯದ ಮುಖಂಡ ಟಿ. ರತ್ನಾಕರ, 'ರಾಜ್ಯದ ಬಹುದೊಡ್ಡ ಸಂಖ್ಯೆಯ ವಾಲ್ಮೀಕಿ ಸಮುದಾಯವನ್ನು ನಿಂದಿಸುವ ಮೂಲಕ ರಮೇಶ ಕತ್ತಿ ದೊಡ್ಡ ತಪ್ಪು ಮಾಡಿದ್ದಾರೆ. ಸದಾ ಹೋರಾಟದ ಬದುಕನ್ನು ಸಾಗಿಸಿ ಶಾಂತಿ ಸೌಹಾರ್ದಕ್ಕೆ ಹೆಸರಾದ ನಮ್ಮ ಸಮುದಾಯವನ್ನು ಕೆದಕುವ ಮೂಲಕ ರಾಜ್ಯದಲ್ಲಿ ಶಾಂತಿ ಕದಡಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಾಸಭಾ ಅಧ್ಯಕ್ಷ ಕೆ.ಎನ್.ಪಾಟೀಲ, ಜಿಲ್ಲಾ ವಾಲ್ಮೀಕಿ ಗುರುಪೀಠದ ಧರ್ಮದರ್ಶಿ ರಾಮಣ್ಣ ಕಲ್ಲನವರ, ಮುಖಂಡರಾದ ಮಂಜುನಾಥಜಿ.ಗೊಂಡಬಾಳ, ಬಸವರಾಜ ಶಹಪೂರ, ಹನುಮೇಶ ನಾಯಕ, ರಾಮಣ್ಣ ಚೌಡಕಿ, ಶಿವಮೂರ್ತಿ ಗುತ್ತೂರ, ಕೊಟೇಶ ದದೇಗಲ್, ಜ್ಯೋತಿ ಎಂ. ಗೊಂಡಬಾಳ, ರಾಮಣ್ಣ ಬೆಳವಿನಾಳ,

ಶಾಂತಪ್ಪ ಬೆಳವಿನಾಳ, ಸೋನು ವದಗನಾಳ, ಶರಣಪ್ಪ ಕನಕಗಿರಿ, ಭೀಮಣ್ಣ ಹವಳೆ, ನಾಗರಾಜ ಇದ್ಲಾಪೂರ, ವಿಶಾಲಾಕ್ಷಮ್ಮ ವಾಲ್ಮೀಕಿ ಪಾಲ್ಗೊಂಡಿದ್ದರು.

# ಕಾರ್ಯಕ್ರಮ ಯಶಸ್ವಿಗೊಳ್ಳಲು ಪ್ರತಿಯೊಬ್ಬರ ಸಹಕಾರ ಅಗತ್ಯ: ಎಂ ಪಾಷಾ ಕಾಟನ್



**ಕೊಪ್ಪಳ :** ಯಾವುದೇ ಕಾರ್ಯಕ್ರಮ ಯಶಸ್ವಿಗೊಳ್ಳಲು ಪ್ರತಿಯೊಬ್ಬರ ಸಹಕಾರ ಅಗತ್ಯವಾಗಿರುತ್ತದೆ ಎಂದು ಕೊಪ್ಪಳ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಂ ಪಾಷಾ ಕಾಟನ್ ಹೇಳಿದರು.

ಅವರು ಕೊಪ್ಪಳದಲ್ಲಿ ದಿ, 25 ರ ಶನಿವಾರ ರಾತ್ರಿ ಸಾಹಿತ್ಯ ಭವನದಲ್ಲಿ ಫಿರ್ ದೋರ್ಸ್ ಸಂಸ್ಥೆ ಹಾಗೂ ಕರ್ನಾಟಕ ಉರ್ದು ಅಕಾಡೆಮಿ ಇವುಗಳ ಸಂಯುಕ್ತ ಆಶಯದಲ್ಲಿ ಏರಿಡಸಿರುವ ಬೃಹತ್ ಕವಿ ಸಮ್ಮೇಳನ ಹಾಗೂ ಉರ್ದು ಮುಷಾಯರಾ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದ ಹಿಂದಿ ಉರ್ದು ಕವಿಗಳು ಕೊಪ್ಪಳಕ್ಕೆ ಆಗಮಿಸಿ ತಮ್ಮ ಕವನ ವಾಚನ ಮಾಡಲಿದ್ದಾರೆ, ನಗರದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಂ ಪಾಷಾ ಕಾಟನ್ ತಿಳಿಸಿದರು.

ಅವರೊಂದಿಗೆ ನಗರ ಆಶ್ರಯ ಸಮಿತಿ ಸದಸ್ಯ ಹುಸೇನ್ ಪೀರಾ ಮುಜಾವರ್, ಸಮಾಜದ ಯುವ ನಾಯಕ ಹಬೀಬ್ ಖಾನ್,

ಉರ್ದು ಸಾಹಿತಿಗಳಾದ ಅನ್ವರ್ ಹುಸೇನ್ ಸಮಧ ಸಿದ್ದಿಕಿ ವಿಜಾರತ್ ಅಲಿ ಸೇರಿದಂತೆ ಕಾರ್ಯಕರ್ತರು ಮತ್ತು ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು,

# ಸುತ್ತೋಲೆ ವಾಪಸ್ ಪಡೆಯಲು ಉಪನ್ಯಾಸಕರು, ಪ್ರಾಚಾರ್ಯರ ಸಂಘದಿಂದ ಮನವಿ ಸಲ್ಲಿಕೆ



**ಕೊಪ್ಪಳ :** ಸರ್ಕಾರಿ ಪದವಿಪೂರ್ವ ಕಾಲೇಜುಗಳ ಶೈಕ್ಷಣಿಕ ಚಟುವಟಿಕೆಗಳ ಸ್ಥಿತಿಗತಿ ಮಾಹಿತಿ ಸಂಗ್ರಹಿಸುವ ಮತ್ತು ಪರಿಶೀಲನೆ ಮಾಡುವ ಸುತ್ತೋಲೆಯನ್ನು ಶಾಲಾ ಶಿಕ್ಷಣ ಇಲಾಖೆಯ ಪದವಿ ಪೂರ್ವ ಶಿಕ್ಷಣ ಮತ್ತು ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ (ಡಿ.ಎಸ್.ಇ.ಆರ್.ಟಿ) ಇಲಾಖೆಗಳು ಇತ್ತೀಚೆಗೆ ಜಂಟಿ-ಯಾಗಿ ಹೊರಡಿಸಿದ್ದು, ಇದನ್ನು ವಾಪಸ್ ಪಡೆಯಬೇಕು ಎಂದು ಪಿಯು ಉಪನ್ಯಾಸಕರು ಹಾಗೂ ಪ್ರಾಚಾರ್ಯರ ಸಂಘಗಳು ಒತ್ತಾಯಿಸಿವೆ.

ಕಾಲೇಜುಗಳ ಶೈಕ್ಷಣಿಕ ಹಾಗೂ ಇತ-ರೆ ಸೌಕರ್ಯಗಳ ಪರಿಶೀಲನೆಗೆ ಅಭ್ಯಂತರವಿಲ್ಲ. ನಮ್ಮದೇ ಇಲಾಖೆಯ ಅಧಿಕಾರಿಗಳು, ಹಿರಿಯ ಪ್ರಾಚಾರ್ಯರು, ಉಪನ್ಯಾಸಕರಿಂದ ಪರಿಶೀಲನೆ ತಕರಾರಿಲ್ಲ. ಆದರೆ ನಮ್ಮ ಇಲಾಖೆಗೆ ಸಂಬಂಧವೇ ಇರದ ಡಯಟ್ ಅಧಿಕಾರಿಗಳು ಹಾಗೂ ಉಪನ್ಯಾಸಕರಿಂದ ಕಾಲೇಜುಗಳ ಪರಿಶೀಲನೆ ಯಾಕೆ' ಎಂದು ಎರಡೂ ಸಂಘದವರು ಪ್ರಶ್ನಿಸಿದ್ದಾರೆ.

ಈ ಸುತ್ತೋಲೆಯು ಅವೈಜ್ಞಾನಿಕವಾಗಿದ್ದು ನೌಕರರಲ್ಲಿ ಅಭದ್ರತೆ ಕಾಡುತ್ತದೆ. ಕೂಡಲೇ ಇದನ್ನು ವಾಪಸ್ ಪಡೆಯಬೇಕು' ಎಂದು ಆಗ್ರಹಿಸಿದರು.

ಡಿಡಿಪಿಯು ಜಿ.ಎಚ್. ಜಗದೀಶ ಅವರಿಗೆ ಮನವಿ ಸಲ್ಲಿಸಿದರು.

ಪ್ರಾಚಾರ್ಯರ ಸಂಘದ ಅಧ್ಯಕ್ಷ ಬಸಪ್ಪ ನಾಗೋಲಿ, ಕಾರ್ಯದರ್ಶಿ ಬಸವರಾಜ, ಖಜಾಂಚಿ ಟಿ.ಸಿ.ಶಾಂತಪ್ಪ, ಉಪನ್ಯಾಸಕರ ಸಂಘದ ಅಧ್ಯಕ್ಷ ಸೋಮಶೇಖರಗೌಡ, ಕಾರ್ಯಾಧ್ಯಕ್ಷ ಮಾರುತಿ ಲಕಮಾಪುರ, ಹಿರಿಯ ಪ್ರಾಚಾರ್ಯರಾದ ರಾಜಶೇಖರ ಪಾಟೀಲ, ಶಿವಾನಂದ, ಮಂಜುನಾಥ ಸ್ವಾಮಿ, ಉಪನ್ಯಾಸಕರಾದ ಸಿದ್ಧಲಿಂಗಪ್ಪ ಕೊಟ್ನೆಕಲ್, ರಾಚಪ್ಪ ಕೇಸರಬಾವಿ, ಕೆ.ಎಸ್.ಹುಲಿ, ಎಸ್.ವಿ.ಮೇಳಿ, ಕೆ.ಎಚ್. ಕೊಳ್ಳಣ್ಣನವರ, ಶಿವಾನಂದ ಮೇಟಿ, ಲಲಿತಮ್ಮಾ ಪಾಲ್ಗೊಂಡಿದ್ದರು.

# ಇರಕಲ್‌ಗಡಾದಲ್ಲಿ ತಂಬಾಕು ಮುಕ್ತ ಯುವ ಅಭಿಯಾನ 3.0 ಕಾರ್ಯಕ್ರಮ




**ಕೊಪ್ಪಳ :** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾಸರ್ವೇಕ್ಷಣಾಧಿಕಾರಿಗಳಕಚೇರಿಕೊಪ್ಪಳಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಇರಕಲ್ಲಗಡರವರ ಸಂಯುಕ್ತಾಶ್ರಯದಲ್ಲಿ ಇರಕಲ್‌ಕಡಾದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗುರುವಾರದಂದು (ಅ.23) ಸಾರ್ವಜನಿಕರಿಗೆ ಹಾಗೂ ಸಿಬ್ಬಂದಿಗಳಿಗೆ ತಂಬಾಕು ಮುಕ್ತ ಯುವ ಅಭಿಯಾನ 3.0 (ವಿಶೇಷ ಅಭಿಯಾನ 60 ದಿನಗಳು) ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಐಇಸಿ ಪ್ರಚಾರ ಹಾಗೂ ತಂಬಾಕು ಸೇವನೆಯ ದುಷ್ಪರಿಣಾಮಗಳು, ಕೋಟ್ಪಾ ಕಾಯ್ದೆ-2003ರ ಬಗ್ಗೆ ಹಾಗೂ ತಂಬಾಕು ಸೇವನೆಯನ್ನು ತ್ಯಜಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜಾಗೃತಿಯನ್ನು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ತಂಡದ ಸಂಗಪ್ಪ ಮಮಟಗೇರಿ, ಜಿಲ್ಲಾ ಸಲಹೆಗಾರರಾದ ಸರಸ್ವತಿ, ಸಮಾಜ ಕಾರ್ಯಕರ್ತರಾದ ಡಾ.ಲಕ್ಷ್ಮಿ ಕೆ, ಶೈಲಜಾ ಎಲ್.ಎಚ್.ವಿ ಆಸ್ಪತ್ರೆಯ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ಸಮೀಕ್ಷೆಯಿಂದ ಹೊರಗುಳಿದ ದೇವದಾಸಿ ಮಹಿಳೆಯರನ್ನು ಪರಿಗಣಿಸಲು ಆಗ್ರಹ



**ಗಂಗಾವತಿ :** ಸಮೀಕ್ಷೆ ಪಟ್ಟಿಯಿಂದ ಹೊರಗುಳಿದ ದೇವದಾಸಿ ಮಹಿಳೆ ಮತ್ತು ಅವರ ಕುಟುಂಬ ಸದಸ್ಯರನ್ನು ಕೂಡಲೇ ಪಟ್ಟಿಗೆ ಸೇರಿಸಿ ಪುನರ್ವಸತಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಗುರುವಾರ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ತಾಲ್ಲೂಕು ಸಮಿತಿ ಸಿಡಿಪಿಒ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿತು.

ತಾಲ್ಲೂಕು ಸಮಿತಿ ಅಧ್ಯಕ್ಷೆ ಜಿ.ಹುಲಿಗೆಮ್ಮ ಮಾತನಾಡಿ, 'ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ನಿರಂತರವಾಗಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಹೋರಾಟ ನಡೆಸುತ್ತಾ ಬಂದಿದ್ದು, ದೌರ್ಜನ್ಯದ ದೇವದಾಸಿ ಪದ್ಧತಿ ರದ್ದತಿಗೆ ದೇವದಾಸಿ ನಿಷೇಧ ಮಸೂದೆ-2025 ಜಾರಿ ಮಾಡಿರುವುದು ಶ್ಲಾಘನೀಯ. ಈಚೆಗೆ ದೇವದಾಸಿ ಮಹಿಳೆಯರ ಮತ್ತು ಕುಟುಂಬಸ್ಥರ ಮರು ಸಮೀಕ್ಷೆ ನಡೆಸಿದ್ದು, ದೇವದಾಸಿಗಳಿದ್ದರೂ ಸಮೀಕ್ಷೆ ಪಟ್ಟಿಯಲ್ಲಿ ಹೆಸರಿಲ್ಲ ಎಂಬ ಕಾರಣಕ್ಕೆ ಅವರಿಗೆ ಮತ್ತು ಮಕ್ಕಳಿಗೆ ಪ್ರಮಾಣಪತ್ರ ನೀಡದೆ, ಪಟ್ಟಿಯಿಂದ ದೂರ ಮಾಡುತ್ತಿರುವುದು ನೋವಿನ ಸಂಗತಿಯಾಗಿದೆ' ಎಂದರು.

ಪಟ್ಟಿಯಿಂದ ಹೊರಗುಳಿದ ದೇವದಾಸಿ ಮಹಿಳೆಯರು ಮತ್ತು ಕುಟುಂಬಸ್ಥರನ್ನು ಪಟ್ಟಿಗೆ ಸೇರಿಸಿ 2026ರ ಬಜೆಟ್‌ನಲ್ಲಿ ಎಲ್ಲರಿಗೂ ಸೌಲಭ್ಯಗಳನ್ನು ಒದಗಿಸಬೇಕು' ಎಂದು ಒತ್ತಾಯಿಸಿದರು.

ತಾಲ್ಲೂಕು ಸಮಿತಿ ಕಾರ್ಯದರ್ಶಿ ಮಂಜುನಾಥ ಡಗ್ಗಿ, ನಿರುಪಾದಿ ಬೆಣಕಲ್, ಎಂ.ಬಸವರಾಜ, ಹುಸೇನಪ್ಪ, ಮರೀನಾ ಗಪ್ಪಡಗ್ಗಿ,

ದುರ್ಗಮ್ಮ, ನಾಗಮ್ಮ, ಈರಮ್ಮ, ಗಂಗಮ್ಮ, ಕವಿತಾ, ಭಾಗಮ್ಮ, ಕೆಂಚಮ್ಮ, ಯಮನಮ್ಮ, ಹುಲಿಗೆಮ್ಮ ಉಪಸ್ಥಿತರಿದ್ದರು.

# ತುಂಗಭದ್ರಾ ಒಳಹರಿವು ಹೆಚ್ಚಳ: ಪ್ರವಾಹದ ಎಚ್ಚರಿಕೆ

**ಮುನಿರಾಬಾದ್:** ಇಲ್ಲಿನ ತುಂಗಭದ್ರಾ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದ್ದು, ಯಾವುದೇ ಸಮಯದಲ್ಲಿ ಕ್ರಸ್ಟ್ ಗೇಟ್ ಮೂಲಕನದಿಗೆನೀರನ್ನುಹರಿಸಲಾಗುವುದು. ನದಿ ಪಾತ್ರದ ಜನ ಎಚ್ಚರಿಕೆ ವಹಿಸಬೇಕು ಎಂದು ತುಂಗಭದ್ರಾ ಮಂಡಳಿ ಎಚ್ಚರಿಕೆ ನೀಡಿದೆ.

ಶಿವಮೊಗ್ಗ ಸೇರಿದಂತೆ ಮಲೆನಾಡು ಭಾಗದಲ್ಲಿ

ಕಳೆದ ಮೂರ್ನಾಲ್ಕು ದಿನಗಳಿಂದ ಬಹಳಷ್ಟು ಮಳೆಯಾಗುತ್ತಿದ್ದು, ತುಂಗಭದ್ರೆಯ ಉಪನದಿಗಳು ತುಂಬಿ ಹರಿಯುತ್ತಿವೆ. ತುಂಗಾ ಮತ್ತು ಭದ್ರಾ ಜಲಾಶಯ ತುಂಬಿ, ಹೆಚ್ಚುವರಿ ನೀರನ್ನು ಹೊರಬಿಡಲಾಗುತ್ತಿದೆ. ಪ್ರಸ್ತುತ ಜಲಾಶಯಕ್ಕೆ ಒಳಹರಿವಿನ ಪ್ರಮಾಣ 14 ಸಾವಿರ ಕ್ಯೂಸೆಕ್ ಇದೆ. ಇದು 25 ಸಾವಿರ ಕ್ಯೂಸೆಕ್‌ವರೆಗೆ ಹೆಚ್ಚಳವಾಗುವ ಸಾಧ್ಯತೆ ಇದೆ. ಜಲಾಶಯದ ನೀರಿನ ಮಟ್ಟ 1,628 ಅಡಿ ತಲುಪುವ ಮೊದಲೇ ನದಿಗೆ ನೀರನ್ನು ಹರಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

# ಹುಲಜಂತಿ ಜಾತ್ರೆ ವಿಶೇಷ ವಾಹನಗಳಿಂದ 22 ಲಕ್ಷ ರೂ.ಗಳ ಆದಾಯ: ರೇವಣಸಿದ್ಧ ಖೈನೂರ



**ಇಂಡಿ :** ಮುಕ್ತಾಯಗೊಂಡ ಹುಲಜಯಂತಿ ಜಾತ್ರೆಗೆ ಇಂಡಿ ಘಟಕದ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ 22 ಲಕ್ಷ ರೂ ಗಳ ಆದಾಯವಾಗಿದೆ ಎಂದು ಘಟಕ ವ್ಯವಸ್ಥಾಪಕ ರೇವಣಸಿದ್ದ ಖೈನೂರ ತಿಳಿಸಿದ್ದಾರೆ.

ಹುಲಜಂತಿ ಜಾತ್ರೆ ನಿಮಿತ್ಯ ಹೋದ ಬಸ್ಸಗಳು ಕೊನೆಗೆ ಮರಳಿ ಬಂದ ಬಸ್ಸಿಗೆ ಪೂಜೆ ಸಲ್ಲಿಸಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಇಂಡಿಯಿಂದ ಹುಲಜಯಂತಿಗೆ 45 ಬಸ್ಸುಗಳು 241 ಟ್ರೀಪ್ ಗಳು ಸೇರಿ ಒಟ್ಟು 22 ಲಕ್ಷ ಆದಾಯ ಬಂದಿದ್ದು ಇದು ವಿಜಯಪುರ ಜಿಲ್ಲೆಯಲ್ಲಿ ಡಿಪೊಗಳಲ್ಲಿ ಹುಲಜಂತಿ ಜಾತ್ರೆಗೆ ಇಂಡಿ ಡಿಪೊ ಪ್ರಥಮ ಸ್ಥಾನದಲ್ಲಿದೆ

ಎಂದು ತಿಳಿಸಿದ್ದಾರೆ.

ಇಂಡಿ ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಕಡೆಗಳಿಂದ ಅಂದಾಜು 40 ಸಾವಿರಕ್ಕೂ ಅಧಿಕ ಪ್ರಾಯಾಣಿಕರು ಪ್ರಯಾಣ ಮಾಡಿರುವದಾಗಿ ತಿಳಿಸಿದ್ದಾರೆ.

ಆನಂದ ಬಡಿಗೇರ, ಎಂ.ಆರ್.ಪಾರ್ಥನಳ್ಳಿ, ಎನ್.ಎಸ್.ಹೊಟಗೊಂಡ, ಎಲ್,ಆರ್. ರಾಠೋಡ, ಜಿ.ಎಂ.ಸೋನಾವನೆ,ಟಿ.ಕೆ.ರಾಠೋಡ, ವಾಯ್.ಬಿ.ಬಿಸೆ, ಗಂಗಾಧರ ಸಾಲೇಗಾಂವ , ರಾವುತಪ್ಪ ಹೊನಕಟ್ಟಿ, ಜಿ.ಕೆ.ಸರಸಂಬಿ ಮತ್ತಿತರಿದ್ದರು.

# ಮದುಬನ ಭೂಮಿಯ ಮೇಲಿನ ಸ್ವರ್ಗ ತ್ಯಾಗ, ತಪ್ಪಸ್ಸಿನ ತಾಣ : ಬಿ ಕೆ ಯಮುನಾ ಅಕ್ಕಾ



**ಇಂಡಿ :** ಮೌಂಟ್ ಅಬುದಲ್ಲಿಯ ಮದುಬನ ಭೂಮಿಯಮೇಲಿನಸ್ವರ್ಗದಜೊತೆಗೆತ್ಯಾಗ ತಪಸ್ಸಿನ ತಾಣವಾಗಿದೆ ಅಲ್ಲಿರುವ ತಪಸ್ಸಿನ ಶಕ್ತಿಗೆ ಎಂತಹ ಕೆಟ್ಟ ಸಂಸ್ಕಾರವುಳ್ಳವರು ಉತ್ತಮರಾಗಿ ಪರಿವರ್ತನೆ ಯಾಗುತ್ತಾರೆ-ಂದು ಈಶ್ವರಿ ಪರಿವಾರದ ಬಿ.ಕೆ.ಯನುನಾ ಅಕ್ಕಾ ಹೇಳಿದರು.

ಪಟ್ಟಣದಈಶ್ವರೀಯವಿವಿಯಲ್ಲಿದೀಪಾವಳಿ ಆಚರಣೆ ಅಂಗವಾಗಿ ನಡೆದ ಆಧ್ಯಾತ್ಮ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇಲ್ಲಿ ಯಾವದೇ ಜಾತಿ, ಧರ್ಮ, ಕುಲ ಗೋತ್ರ ಕೇಳುವದಿಲ್ಲ ಎಲ್ಲರೂ ಪರಮಾತ್ಮನ ಸಾನಿದ್ಯದಲ್ಲಿ ಒಂದೇ ಆಗಿದ್ದಾರೆ ಎಂದರು.

ಬಿ.ಕೆ ಶ್ರೀದೇವಿ ಅಕ್ಕನವರು ಮಾತನಾಡಿ ಮೌಂಟ್ ಅಬುವುನಲ್ಲಿ ಮಧುಬನ ದಲ್ಲಿ ಒಂದು ಅದ್ಭುತ ಶಕ್ತಿ ಅಡಗಿದೆ. 90 ವರ್ಷಗಳ ಪಯರ್ಂತ ಈಶ್ವರಿಯ ವಿ ವಿ ಆಧ್ಯಾತ್ಮಿಕ ಅನುಭವ ಹಂಚಿಕೊಳ್ಳುವ ಕಾರ್ಯ ಮಾಡುತ್ತಿದೆ. ಶಿವಬಾಬಾ ಇಲ್ಲಿ ಮಹಿಳೆರನ್ನು ಮುಂದಿಟ್ಟು ಈಶ್ವರಿಯ ಕಾರ್ಯ ಮಾಡುತ್ತಿದ್ದಾರೆ. ಮಹಿಳೆಯರ ತ್ಯಾಗ ತಪಸ್ಸು ಸಹನೆ ಇಂತಹ ಒಂದು ಅಘಾಧವಾದ ಆಧ್ಮಾತಿಕ ಅನುಭವದ ಸಂಸ್ಥೆ ಕಟ್ಟಲು ನೆರವಾಯಿತು. ಎಂದರು.

ನಿವೃತ್ತ ಪ್ರಾಚಾರ್ಯ ಎ.ಎಸ್.ಗಾಣಿಗೇರ ಮಾತನಾಡಿ ದೀಪಾವಳಿ ಹಬ್ಬ ನಮ್ಮೆಲ್ಲರನ್ನು ಒಂದುಗೂಡಿಸಿದೆ. ಪ್ರತಿಯೊಬ್ಬರು ಮನಸ್ಸಿನ ಮೂಲೆ ಮೂಲೆ ಯನ್ನು ಸ್ವಚ್ಛಗೊಳಿಸಿಕೊಂಡು ದ್ವೇಷ ಅಸೂಯೆ ದುರ್ಬಲತೆ ಆಲಸ್ಯ ಎಂಬ ಹಳೆಯ ಖಾತೆ ಸಮಾಪ್ತಿ ಮಾಡಿಕೊಂಡು ಎಲ್ಲರ ಬಗ್ಗೆ ಶುಭಕಾಮನೆ ಹಂಚಬೇಕಾಗಿದೆ ವ್ಯರ್ಥ ಚಿಂತೆಗಳಿಂದ ಹಳೆಯ ಬಟ್ಟೆ ತ್ಯಜಿಸಿ ಶ್ರೇಷ್ಠ ವಿಚಾರ ಎಂಬ ಹೊಸ ಬಟ್ಟೆ ಧರಿಸಿಕೊಳ್ಳುವದು ನಿಜವಾದ ದೀಪಾವಳಿ ಎಂದರು. ನಿವೃತ್ತ ಶಿಕ್ಷಕ ಜಿ.ಬಿ.ಬಿರಾದಾರ, ಅರವಿಂದ ಕಠಾರೆ,ಶಿವಲಿಂಗಪ್ಪ ಪಟ್ಟದಕಲ್ಲ, ಸುಮಂಗಲಾ ಪಾತಂಗೆ,ಉಮಾ ಪಟ್ಟದಕಲ್ಲ, ಗಿರಿಜಾ ಪೂಜಾರಿ, ರಾಜಶ್ರೀ ಕೋಳೆಕರ, ಬಸಮ್ಮ ಪೋಲಿಸ ಪಾಟೀಲ, ಬಿ.ಕೆ ಪಲ್ಲವಿ ಮತ್ತಿತರಿದ್ದರು.

# ಕರ್ನಾಟಕ ಕಬಡ್ಡಿ ತಂಡಕ್ಕೆ ಮುದ್ದೇಬಿಹಾಳದ ಮೂವರು ಆಟಗಾರರ ಆಯ್ಕೆ




**ಮುದ್ದೇಬಿಹಾಳ:** ತುಮಕೂರಿನಲ್ಲಿನಡೆದರಾಜ್ಯಮಟ್ಟದ ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಮುದ್ದೇಬಿಹಾಳದ ಎಸ್.ಎಸ್.ಶಿವಾಚಾರ್ಯರ ಸ್ವಾತಂತ್ರ್ಯ ಕಲಾ ವಾಣಿಜ್ಯ ಹಾಗೂವಿಜ್ಞಾನಪ.ಪೂಕಾಲೇಜುತಂಡವಿಜಯಪುರ ತಂಡ ಪ್ರತಿನಿಧಿಸಿ ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ಈ ಕಾಲೇಜಿನ ಮೂವರು ಆಟಗಾರರು ರಾಷ್ಟ್ರ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಲಿದ್ದಾರೆ. ಎಸ್.ಎಸ್.ಶಿವಾಚಾರ್ಯ ಕಾಲೇಜಿನ ಸಂದೀಪ ಚವ್ಹಾಣ, ವಿವೇಕಾನಂದ ಲಮಾಣಿ ಹಾಗೂ ಅನೀಲ ತಳಗೇರಿ ಆಯ್ಕೆಯಾದ ಕ್ರೀಡಾಪಟುಗಳು.

ಸ್ಪರ್ಧೆಯಲ್ಲಿ ಸಂದೀಪ ಚವ್ಹಾಣ ಅತ್ಯುತ್ತಮ ದಾಳಿಗಾರನಾಗಿ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಕ್ರೀಡಾಪಟುಗಳ ಸಾಧನೆಗೆ ವಿಜಯಪೂರ ಜಿಲ್ಲೆಯ ಪಿಯುಡಿಡಿಚಂದ್ರಶೇಖರಹೊಸಮನಿ,ಶಾಖಾಧಿಕಾರಿ ಪ್ರಕಾಶ ಗೊಂಗಡಿ, ಕಾಲೇಜಿನ ಕಾರ್ಯದರ್ಶಿ ರವಿ ನಾಯಕ, ಕಾಲೇಜಿನ ಪ್ರಾಚಾರ್ಯರಾದ ಆಯ್.ಎ.ಬಿರಾದಾರ , ತರಬೇತಿದಾರ ಬಸವರಾಜ ಚಿನ್ನಾಪೂರ, ತಂಡದ ಮ್ಯಾನೇಜರ ಚೇತನ ರಾಠೋಡ, ಸಿಬ್ಬಂದಿ ಅಭಿನಂದಿಸಿದ್ದಾರೆ.

ರಾಜ್ಯಮಟ್ಟದ ತಂಡದಲ್ಲಿ ವಿಜಯಪುರ ಜಿಲ್ಲಾ ತಂಡವನ್ನು ಸಂದೀಪ ಚವ್ಹಾಣ, ವಿವೇಕಾನಂದ ಲಮಾಣಿ, ಅನೀಲ ತಳಗೇರಿ, ಶಿವ ರಾಠೋಡ,ಭರತ ಕಾಂಬಳೆ, ಸಂಪತ್ ತೊರ್ಲಿ, ದರ್ಶನ ಹುಗ್ಗಿನ್ನವರ, ಆಕಾಶ ಪೂಜಾರಿ, ಅಬ್ದುಲರಜಾಕ ಮಕಾನದಾರ, ಪ್ರಜ್ವಲ ಈಟಿ, ಸಂದೀಪ ಗಾಯಕವಾಡ, ದೇವಾಂಶ ದಯನ್ನವರ ಪ್ರತಿನಿಧಿಸಿದ್ದರು.

# ರಾಣಿ ಚನ್ನಮ್ಮಳ ಜೀವನವು ಧೈರ್ಯ, ದೇಶಭಕ್ತಿಯ ಪ್ರತೀಕ: ಸಂತೋಷ ಬಂಡೆ



**ಇಂಡಿ:** ಕಿತ್ತೂರು ರಾಣಿ ಚನ್ನಮ್ಮಳ ಜೀವನವು ಧೈರ್ಯ, ತ್ಯಾಗ ಮತ್ತು ದೇಶಭಕ್ತಿಯ ಪ್ರತೀಕವಾಗಿದೆ.

ಅವರ ಆದರ್ಶ ಮತ್ತು ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸುಸ್ಥಿರ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈ ಜೋಡಿಸಬೇಕು ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಗುರುವಾರದಂದು ತಾಲೂಕಿನ ಹಿರೇರೂಗಿ ಗ್ರಾಮದ ಕೆಬಿಎಸ್, ಕೆಜಿಎಸ್, ಯುಬಿಎಸ್ ಶಾಲೆಯಲ್ಲಿ ಹಮ್ಮಿಕೊಂಡ ಕಿತ್ತೂರು ರಾಣಿ ಚನ್ನಮ್ಮನವರ ಜಯಂತಿ ಆಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕನ್ನಡ ನಾಡನ್ನಾಳಿದ, ತನ್ನ ಚಿಕ್ಕ ಸಂಸ್ಥಾನವನ್ನು ಬ್ರಿಟಿಷರಿಗೆ ಬಿಟ್ಟು-ಕೊಡದೆ ಸೆಣಸಿದ ಧೀಮಂತ ಮಹಿಳೆ ರಾಣಿಚನ್ನಮ್ಮಳು ಇಂದಿನ ಯುವ ಜನತೆಗೆ ಸ್ಫೂರ್ತಿಯ ಸೆಲೆಯಾಗಿದ್ದಾಳೆ. ಅವರ ಸಾಹಸ ಮತ್ತು ನಾಯಕತ್ವವು ಎಲ್ಲರಿಗೂ ಪ್ರೇರಣೆಯಾಗಿದೆ ಎಂದರು.

ಶಿಕ್ಷಕ ಎಸ್ ಆರ್ ಚಾಳೇಕರ ಮಾತನಾಡಿ, ಕಿತ್ತೂರು ರಾಣಿ ಚನ್ನಮ್ಮ ಎಂದರೆ ಧೈ-ರ್ಯ, ಸಾಹಸ, ಸ್ವಾಭಿಮಾನದ ಸಂಕೇತ, ದೇಶಪ್ರೇಮದ ಪ್ರತೀಕ . ಸ್ವಾಭಿಮಾನಿ ಸೈನಿಕರನ್ನು ಒಗ್ಗೂಡಿಸಿ ಸ್ವತಂತ್ರ ರಾಜ್ಯಕ್ಕಾಗಿ ಛಲಬಿಡದೆ ಹೋರಾಡಿದ ವಿರವನಿತೆ ಅವಳಾಗಿದ್ದಾಳೆ ಎಂದು ಹೇಳಿದರು.

ಮುಖ್ಯ ಶಿಕ್ಷಕರಾದ ಅನಿಲ ಪತಂಗಿ, ವ್ಹಿ ವೈ ಪತ್ತಾರ, ಎಸ್ ಎಸ್ ಅರಬ ಹಾಗೂ ಶಿಕ್ಷಕರಾದ ಎಸ್ ಎನ್ ಡಂಗಿ, ಜೆ ಸಿ ಗುಣಕಿ, ಜೆ ಎಂ ಪತಂಗಿ, ಸಾವಿತ್ರಿ ಸಂಗಮದ, ಎಸ್ ಡಿ ಬಿರಾದಾರ, ಎಫ್ ಎ ಹೊರ್ತಿ, ಎಸ್ ಬಿ ಕುಲಕರ್ಣಿ, ಶ್ರದ್ಧಾ ಬಂಕಲಗಾ, ಎನ್ ಬಿ ಚೌಧರಿ, ಎಸ್ ಪಿ ಪೂಜಾರಿ,ಶಾಂತೇಶ ಹಳಗುಣಕಿ, ಸುರೇಶ ದೊಡ್ಯಾಳಕರ, ಅತಿಥಿ ಶಿಕ್ಷಕರಾದ ಬಿ ಎಸ್ ಹೊಸೂರ, ಪ್ರಜ್ವಲ್ ಕುಲಕರ್ಣಿ, ಅಲ್ಫಿಯಾ ಅಂಗಡಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಮಲ್ಲಗಂಬ ಸ್ಪರ್ಧೆ: ರಾಜ್ಯಮಟ್ಟಕ್ಕೆ ಆಯ್ಕೆ



**ವಿಜಯಪುರ :** ಇತ್ತೀಚೆಗೆ ವಿಜಯಪುರ ಜಿಲ್ಲಾ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಮಲ್ಲಗಂಬ ಸ್ಪರ್ಧೆಯಲ್ಲಿ ಮುಳವಾಡ ಗ್ರಾಮದ ಶಿವರಾಯ ಶಾಲೆಯ ವಿದ್ಯಾರ್ಥಿ ಮಹೇಶ ಚಿಮ್ಮಲಗಿ ಪ್ರಥಮ ಸ್ಥಾನಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

ಪ್ರಾಥಮಿಕ ಶಾಲಾ ವಿಭಾಗದಲ್ಲಿ ಮಹೇಶ 90ಸೆಕೆಂಡ್ ನಲ್ಲಿ 11 ಆಸನಗಳನ್ನುಮಾಡುವ ಮೂಲಕ ಪ್ರಥಮ ಸ್ಥಾನ ಗಳಿಸಿದ್ದಾನೆ. ಇದೇ ತಿಂಗಳ ಕೊನೆಯಲ್ಲಿ ಗದಗದಲ್ಲಿ ನಡೆಯುವ ರಾಜ್ಯ ಮಟ್ಟದ ಮಲ್ಲಗಂಬ ಸ್ಪರ್ಧೆಯಲ್ಲಿ ವಿಜಯಪುರ ಜಿಲ್ಲೆಯನ್ನು ಪ್ರತಿನಿಧಿಸಲಿದ್ದಾನೆ.

ವಿದ್ಯಾರ್ಥಿಯ ಈ ಸಾಧನೆಗೆ ಶಾಲೆಯ ಅಧ್ಯಕ್ಷ, ಸಿಬ್ಬಂದಿ ವರ್ಗ ಮತ್ತು ಎಸ್‌ಡಿಎಂಸಿ ಅಧ್ಯಕ್ಷ, ಸದಸ್ಯರು, ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

# ಬಿಜೆಪಿ ಪಕ್ಷ ಆರ್‌ಎಸ್‌ಎಸ್‌ನ ಕಪಿ ಮುಷ್ಟಿಯಲ್ಲಿದೆ: ಜಿಲ್ಲಾದ್ಯಕ್ಷ ನಂಜಯ್ಯನಮಠ



**ಜಮಖಂಡಿ:** ಬಿಜೆಪಿ ಪಕ್ಷ ಆರ್.ಎಸ್.ಎಸ್ ಕಪಿ ಮುಷ್ಟಿಯಲ್ಲಿದೆ ಆರೆಸ್‌ಎಸ್ ನ ಪ್ರಮುಖರಾದ ಮೊಹನ್ ಭಾಗವತ್‌ರ ಸೂಚನೆಯನ್ನೇ ಬಿಜೆಪಿ ಪರಿಪಾಲನೆ ನಡೆದುಕೊಂಡು ಹೋಗುತ್ತಿರುವದು. ಆರೆಸ್‌ಎಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖವಿದ್ದಂತೆ ಎಂಬುವುದು ಇಡೀ ದೇಶಕ್ಕೆ ಗೊತ್ತಿದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ. ನಂಜಯ್ಯನಮಠ ಹೇಳಿದರು.

ಮಾಜಿ ಶಾಸಕ ಆನಂದ ನ್ಯಾಮಗೌಡ ಅವರ ಗೃಹ ಕಚೇರಿಯಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಬಿಜೆಪಿ ಅವರು ಜಾತ್ಯಾತೀತ ನಿಲುವು ಹೆಜ್ಜೆ ಇಟ್ಟ–ರೆ ಆರ್.ಎಸ್.ಎಸ್ ಇವರನ್ನು ತುಳಿದು ಬಿಡುತ್ತದೆ ಹಿಂದೆ ಆರ್.ಎಸ್.ಎಸ್ ವಾಜಪೆ ಬಗ್ಗೆ ಕೆಲವೊಂದು ಅಸಮಾಧಾನ ಇತ್ತು ಅಡ್ವಾಣಿ ಅವರು ಕವಿ ಹೃದಯದವರು ಮಾನವಿತೆ,ಧರ್ಮ ಪ್ರಜ್ಞೆ ಹಾಗೂ ಕರ್ತವ್ಯ ಪ್ರಜ್ಞೆ ಇವರಲ್ಲಿ ಇತ್ತು ಆರ್.ಎಸ್.ಎಸ್ ನವರಿಗೆ ಇವರನ್ನ ಪ್ರಧಾನ ಮಂತ್ರಿ ಮಾಡಿದ ತಪ್ಪ ಆಯ್ತಿಲ್ಲಾ ಅನ್ನುದರ ಮಟ್ಟಿಗೆ ಕೈ ಹಿಚುಕಿದರು

ಮಾಜಿ ಶಾಸಕ ಆನಂದ ನ್ಯಾಮಗೌಡ ಮಾತನಾಡಿ ಸಚಿವ ಪ್ರಿಯಾಂಕ ಖರ್ಗೆ ಅವರು ಕೇಳಿದ ಪ್ರಶ್ನೆಗಳಿಗೆ ಆರೆಸ್‌ಎಸ್‌ನವರು ಯಾಕೆ ಉತ್ತರಿಸುತ್ತಿಲ್ಲ ಎಂದು ಪ್ರಶ್ನಿಸಿದರು. ಬಿಜೆಪಿ ಸರ್ಕಾರ ಹೊರಡಿಸಿದ ಪೂರ್ವಾನುಮತಿ ಪಡೆದು ಸಭೆ, ಸಮಾರಂಭಗಳನ್ನು ನಡೆಸಬೇಕು ಎಂಬ ಆದೇಶವನ್ನೇ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿದೆ. ಸರ್ಕಾರಿ ಜಾಗೆ ಬಳಕೆಗೆ ಎಲ್ಲರಿಗೂ ಅನ್ವಯವಾಗುವಂತೆ ಮಾಡಿದ್ದಾರೆ. ನಮ್ಮ ಕಾಂಗ್ರೆಸ್ ಪಕ್ಷದ ಕಾರ್ಯಕ್ರಮ ಇದ್ದರೂ ಪರವಾನಗಿ ಪಡೆದುಕೊಳ್ಳಬೇಕು. ಆರೆಸ್‌ಎಸ್‌ಗೆ ಮಾತ್ರ ಈ ಆದೇಶವಾಗಿಲ್ಲ ಎಂದು ಹೇಳಿದರು

ನಗರ ಘಟಕದ ಅದ್ಯಕ್ಷ ಮಹೇಶ ಕೋಳಿ,ರವಿ ಯಡಹಳ್ಳಿ ಇದ್ದರು

# ರೊಟ್ಟಿ ಬುತ್ತಿ ಜಾತ್ರೆಯ ಸಂಭ್ರಮ: ಶರಣಬಸವೇಶ್ವರ ಜಾತ್ರಾ ಮಹೋತ್ಸವ

**ಕವಿತಾಳ :** ಸಮೀಪದ ತೋರಣದಿನ್ನಿ ಗ್ರಾಮದಲ್ಲಿ ನಡೆದ ಕಲಬುರಗಿ ಶರಣಬಸವೇಶ್ವರ ಪುರಾಣ ಪ್ರವಚನ ಕಾರ್ಯಕ್ರಮದ ಅಂಗವಾಗಿ ಭಾನುವಾರ ಆಯೋಜಿಸಿದ್ದ ರೊಟ್ಟಿ ಜಾತ್ರೆಯಲ್ಲಿ ಗ್ರಾಮದ ಮಹಿಳೆಯರು ಸಂಭ್ರಮದಿಂದ ಪಾಲ್ಗೊಂಡಿದ್ದರು.

ಅ.29ರಂದು ನಡೆಯುವ ಶರಣಬಸವೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಪುರಾಣ ಪ್ರವಚನ ನಡೆ–ಯುತ್ತಿದೆ. ಪುರಾಣ ಪ್ರವಚನದಲ್ಲಿನ ಸಾರಾಂಶದಂತೆ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಭಕ್ತರಿಗೆ ಉಣಬಡಿಸಲು ಗ್ರಾಮದ 400ಕ್ಕೂ ಹೆಚ್ಚಿನ ಮಹಿಳೆಯರು ಸ್ವಯಂ ಪ್ರೇರಣೆಯಿಂದ ಅಂ–ದಾಜು 2.5 ಸಾವಿರ ರೊಟ್ಟಿಯನ್ನು ತಮ್ಮ ಮನೆಯಲ್ಲಿ ತಯಾರಿಸಿಕೊಂಡು ಬುತ್ತಿ ರೂಪದಲ್ಲಿ ತೆಗೆದಕೊಂಡು ಬಂದು ಸಮರ್ಪಿಸಿದರು.



ಬಣ್ಣಬಣ್ಣದಸೀರೆಯುಟ್ಟಮಹಿಳೆಯರುಮತ್ತುಮಕ್ಕಳು ತಲೆ ಮೇಲೆ ರೊಟ್ಟಿ ಬುತ್ತಿ ಹೊತ್ತು ಕಳಸಗಿತ್ತಿಯೊಂದಿಗೆ ಮೆರವಣಿಗೆ ಮೂಲಕ ಆಗಮಿಸಿದ್ದು ಸಾರ್ವಜನಿಕರ ಗಮನ ಸೆಳೆಯಿತು.

ದಾಸೋಹದ ಮಹತ್ವ ಸಾರುವ ಪುರಾಣ ಪ್ರವಚನದಲ್ಲಿನ ಸಾರಾಂಶದಂತೆ ನಿತ್ಯ ವಿಶೇಷ ಚಟುವಟಿಕೆಗಳು ನಡೆಯುತ್ತಿವೆ,

ರೊಟ್ಟಿ ಬುತ್ತಿ ಜಾತ್ರೆಯಲ್ಲಿ ಮಹಿಳೆಯರು ಮಕ್ಕಳು ಉತ್ಸಾಹದಿಂದ ಪಾಲ್ಗೊಂಡು ಗಮನ ಸೆಳೆದರು' ಎಂದು ಗ್ರಾಮದ ಚನ್ನಯ್ಯಸ್ವಾಮಿ ತಿಳಿಸಿದರು.

# ಕಾರ್ತಿಕ ಕಾಟೆ ಮತ್ತು ಪ್ರಶಾಂತ ಜಗತಾಪ ಪೈಲ್ವಾನರಿಗೆ ಜಯ

## ನಾಲ್ಕು ಮಹಿಳಾ ಜೋಡಿಗಳು | ನಾಲ್ಕು ಗಂಟೆಗೂ ಹೆಚ್ಚು ಕಾಲ ನಡೆದ ಕುಸ್ತಿಪಂದ್ಯಾಟ

**ರಬಕವಿ–ಬನಹಟ್ಟಿ :** ಇಲ್ಲಿನ ಮಲ್ಲಿಕಾರ್ಜುನ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ಅಶೋಕ ಕಾಲೋನಿಯಲ್ಲಿ ನಿರ್ಮಾಣ ಮಾಡಲಾಗಿದ್ದ ಕುಸ್ತಿ ಮೈದಾನದಲ್ಲಿ ಗುರುವಾರ ನಡೆದ ರಾಷ್ಟ್ರ ಮಟ್ಟದ ಜಂಗಿ ನಿಕಾಲಿ ಕುಸ್ತಿ ಪಂದ್ಯಗಳು ಪ್ರೇಕ್ಷಕರ ಗಮನ ಸೆಳೆದವು. ಸಂಜೆ ನಾಲ್ಕು ಗಂಟೆಗೆ ಪ್ರಾರಂಭಗೊಂಡ ಕುಸ್ತಿಗಳು ರಾತ್ರಿ 8.30 ರವರೆಗೂ ನಡೆದವು.

ಸೋಮವಾರ ಪೇಟೆ ಸಮಸ್ತ ದೈವ ಮಂಡಳಿಯ ಅಧ್ಯಕ್ಷ ಮಲ್ಲಿಕಾರ್ಜುನ ತುಂಗಳ ಮತ್ತು ನಗರದ ಮುಖಂಡ ಬ್ರಿಜ್ಮೋಹನ ಡಾಗಾ ಕುಸ್ತಿ ಮೈದಾನಕ್ಕೆ ಪೂಜೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಪಿಕೆಪಿಎಸ್ ಅಧ್ಯಕ್ಷ ಭೀಮಶಿ ಮಗದುಮ್ ಮಾತನಾಡಿ, ಕುಸ್ತಿ ಪಂದ್ಯಗಳು ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಜೀವಂತವಾಗಿವೆ.





ದೇಸಿ ಕ್ರೀಡೆಯಾದ ಕುಸ್ತಿಗೆ ಮತ್ತು ಪೈಲ್ವಾನರಿಗೆ ಪ್ರೋತ್ಸಾಹ ನೀಡಬೇಕಾಗಿದೆ. ಸುಸಜ್ಜಿತವಾದ ಗರಡಿ ಮನೆಗಳ ನಿರ್ಮಾಣ ಕೂಡಾ ಅಗತ್ಯವಾಗಿದೆ ಎಂದರು. 51 ಕುಸ್ತಿ ಜೋಡಿಗಳು ಇಲ್ಲಿ ತಮ್ಮ ಕಲೆಗಳ ಪ್ರದರ್ಶನ ಮಾಡಿದವು. ದಾವಣಗೇರಿಯ ಕಾರ್ತಿಕ ಪೈಲ್ವಾನ ಮತ್ತು ಸೊಲ್ಲಾಪುರದ ವಿಕಾಸ ಧೋತ್ರೆ ಹಾಗೂ ಕಂಗ್ರಾಳಿಯ ಕಾಮೇಶ ಪಾಟೀಲಮತ್ತುಇಚಲಕರಂಜಿಯಪ್ರಶಾಂತ ಜಗತಾಪ ಪೈಲ್ವಾನರ ಮಧ್ಯದಲ್ಲಿ ನಡೆದ ಮೊದಲ ನಂಬರಿನ ಎರಡು ಕುಸ್ತಿಗಳು ನೋಡುಗರ ಗಮನ ಸೆಳೆದವು.

ಕಾರ್ತಿಕ ಕಾಟೆ ಪೈಲ್ವಾನರು ವಿಕಾಸ ಧೋತ್ರೆ ಅವರನ್ನು ಕೆಲವೇ ಸಮಯದಲ್ಲಿ ಚಿತ್ ಮಾಡಿದರೆ, ಪ್ರಶಾಂತ ಜಗತಾಪ ಪೈಲ್ವಾನ ಕಾಮೇಶ ಪೈಲ್ವಾನರನ್ನು ಚಿತ್ ಮಾಡಲು ಸಾಕಷ್ಟು ಸಮಯ ತೆಗೆದುಕೊಂಡರು.

ದಾವಲಸಾಬ್ ಆಸಂಗಿ, ರಮೇಶ ಜಿಡ್ಡಿಮನಿ, ಕಾಡಪ್ಪ ಜಿಡ್ಡಿಮನಿ, ಕಾಡಪ್ಪ ಮಹಿಷವಾಡಗಿ, ಮಾರುತಿ ಮಹಿಷವಾಡಗಿ, ಹನುಮಂತ ಕುಡಚಿ, ಮಲ್ಲಪ್ಪ ಜಿಡ್ಡಿಮನಿ ಹಾಗೂ ಮಂಜು ಜಿಡ್ಡಿಮನಿ ನಿರ್ಣಾಯಕರಾಗಿ ಕೆಲಸ ಮಾಡಿದರು. ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ಅಧ್ಯಕ್ಷ ಕೀರ್ತಿ ಗಣೇಶ, ಡಾ. ಮಲ್ಲಿಕಾರ್ಜುನ ಬಾವಲತ್ತಿ, ವಿದ್ಯಾಧರ ಸಿದ್ದು ಸವದಿ, ಈರಪ್ಪ ಹಿಪ್ಪರಗಿ, ಮಹಾಶಾಂತ ಶೆಟ್ಟಿ, ಪ್ರಶಾಂತ ಕೊಳಕಿ, ಚನ್ನಪ್ಪ ಗುಣಕಿ, ಶಿವು ಬಾಗೇವಾಡಿ, ಕಿರಣ ಆಳಗಿ, ಧರೆಪ್ಪ ಉಳ್ಳಾಗಡ್ಡಿ, ದಾನಪ್ಪ ಹುಲಜತ್ತಿ, ವಿಶ್ವಜ ಕಾಡದೇವರ ಸೇ–ರಿದಂತೆ ರಬಕವಿ ಬನಹಟ್ಟಿ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮೀಣ ಪ್ರದೇಶದ ಕುಸ್ತಿ ಪ್ರಿಯರು ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಕನ್ನೇರಿ ಮಠದ ಕಾಡಸಿದ್ದೇಶ್ವರ ವಿರುದ್ಧ ಪ್ರತಿಭಟನೆ

**ಬಸವನ ಬಾಗೇವಾಡಿ:** ಕನ್ನೇರಿ ಮಠದ ಕಾಡ ಸಿದ್ದೇಶ್ವರ ಸ್ವಾಮಿಯ ಹೇಳಿಕೆಯನ್ನು ಖಂಡಿಸಿ ಬಸವನಬಾಗೇವಾಡಿಯಲ್ಲಿ ವಿವಿಧ ಸಂಘಟನೆಯ ಭಕ್ತರು ಪ್ರತಿಭಟನೆ ನಡೆಸಿ ಸ್ವಾಮಿಯನ್ನು ಕೂಡಲೇ ಬಂಧಿಸಬೇಕೆಂದು ತಹಶೀಲ್ದಾರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು ಪಟ್ಟಣದ ವಿರಕ್ತಮಠದಲ್ಲಿ ಬಸವ ಭಕ್ತರು ಹಾಗೂ ವಿವಿಧ

ಸಂಘಟನೆಯವರು ಜಮಾವಣೆಯಾಗಿ ಕಾಡು ಸಿದ್ದೇಶ್ವರ ಸ್ವಾಮೀಜಿಯ ಭಾವಚಿತ್ರಕ್ಕೆ ಚಪ್ಪಲಿಯ ಹಾರ ಹಾಕಿ ಮೆರವಣಿಗೆಯನ್ನು ಹಲಿಗೆ ಹಚ್ಚಿ ಬಸವೇಶ್ವರ ಸ್ಮಾರಕ ಮಾರ್ಗವಾಗಿ

ಪತ್ತಾರ ಓಣಿಯ ಮುಖಾಂತರ ಸ್ವಾಮೀಜಿ ವಿರುದ್ಧ ಘೋಷಣೆ ಘೋಷಣೆಗಳನ್ನು ಕೂಗುತ್ತಾ ಬಸವೇಶ್ವರ ವೃತ್ತಕ್ಕೆ ಆಗಮಿಸಿ ಕಾಡು ಸಿದ್ದೇಶ್ವರ ಸ್ವಾಮೀಜಿಯ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು ಸಂದರ್ಭದಲ್ಲಿ ಸ್ಥಳೀಯ ಮಠದ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ ಕರ್ನಾಟಕ ಸರಕಾರ ಬಸವಣ್ಣನನ್ನು ಸಂಸ್ಕೃತಿಕ ನಾಯಕನೆಂದು ಘೋಷಣೆ ಮಾಡಿದರೆ ಸಾಲದೆಂದು ಮಠಾಧೀಶರ ಒಕ್ಕೂಟದಿಂದ ಬಸವ ಸಂಸ್ಕೃತಿ ಅಭಿಯಾನವನ್ನು ಬಸವ



ಜನ್ಮಸ್ಥಳ ಬಸವನ ಬಾಗೇವಾಡಿಯಿಂದ ಪ್ರಾರಂಭವಾಗಿ ಒಂದು ತಿಂಗಳ ಪರಿಯಂತ ಅನೇಕ ಜಿಲ್ಲೆಗಳನ್ನು ಸಂಚರಿಸಿ ಬಸವತತ್ವ ಅವನ ಆದರ್ಶಗಳನ್ನು ಸಮಾಜಕ್ಕೆ ತಿಳಿಪಡಿಸುವ ಮೂಲಕ ಅಕ್ಟೋಬರ್ ಐದರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಮುಖ್ಯಮಂತ್ರಿಯವರಿಂದ ಸಮಾರೋಪ ಕಾರ್ಯಕ್ರಮ ನೆರವೇರಿತು ಈ ಕಾರ್ಯಕ್ರಮ ಯಶಸ್ವಿಯಾಗಿದ್ದನ್ನು ಕಂಡು ಕಾಡಸಿದ್ದೇಶ್ವರ ಸ್ವಾಮೀಜಿಗೆ ಹೊಟ್ಟೆ ಉರಿ ಇದನ್ನುಸಹಿಸದೆಒಕ್ಕೂಟದಸ್ವಾಮೀಜಿ ಅವರಿಗೆಬಸವಭಕ್ತರಿಗೆಅವಾಚ್ಯಶಬ್ದಗಳನ್ನು ಮಾತನಾಡಿರುವ ಕಾಡಸಿದ್ದೇಶ್ವರ ಸ್ವಾಮಿಯನ್ನು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿದರು ಮಸಬಿನಾಳದ ಮಠದ ಸಿದ್ಧರಾಮ ಸ್ವಾಮೀಜಿ ಮಾತನಾಡಿ ಈ ಕನ್ನೇರಿ ಮಠದ ಸ್ವಾಮೀಜಿಯ ಬುದ್ಧಿ ಬ್ರಮಣೆಯಾಗಿದೆ ಸ್ವಾಮಿ ಆಗಿಲಿಕ್ಕೆ ಅಯೋಗ್ಯ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳನ್ನು ಮಾತನಾಡಿರುವ ಈ ಸ್ವಾಮಿ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಬಾಗೇವಾಡಿಗೆಬಂದರೆನಾವೇಚಪ್ಪಲಿಯಲ್ಲಿ ಹೊಡೆದು ಬುದ್ಧಿ ಕಲಿಸುತ್ತೇವೆ ಎಂದರು ಸಾಹಿತಿ ಲರು ಗೊಳಸಂಗಿ ಮಾತನಾಡಿದರು

ಅದೇ ರೀತಿಯಾಗಿ ಬಸವ ಸೈನ್ಯದ ಸಂಸ್ಥಾಪಕ

ಅಧ್ಯಕ್ಷರಾದ ಶಂಕರಗೌಡ ಬಿರಾದಾರ್ ಸಂಗಮೇಶ ಓಲೆಕಾರ್ ನ್ಯಾಯವಾದಿ ವೀರಣ್ಣ

ಮರ್ತುರ್ ಸಂಗನಗೌಡ ಚಿಕ್ಕೊಂಡೆ ಸ್ವಾಮಿ ವಿರುದ್ಧ ಮಾತನಾಡಿದರು ಸಂದರ್ಭದಲ್ಲಿ ವಿವೇಕಾನಂದ ಕಲ್ಯಾಣ್ ಶೆಟ್ಟಿ ಎಂ ಜಿ ಆದಿ ಗುಂಡ ಬಸವರಾಜ್ ಹಾರಿವಾಳ ಸುರೇಶಗೌಡ ಪಾಟೀಲ ಸಂಕನಗೌಡ ಪಾಟೀಲ ಶೇಖರ ಗೊಳಸಂಗಿ ಬಸವರಾಜ ಗೊಳಸಂಗಿ ಮುರಿಗೆಪ್ಪ ಚಿಂಚೋಳಿ ಆರ್ ಜಿ ಅಳಗಿ ಎಸ್ ಎಸ್ ಜಳಕಿ ಎಸ್ ಹೆಚ್ ಬಿರಾದಾರ ಸಿ ಎಲ್ ಮರಾಳ ಶರಣಪ್ಪ ಮಾದರ ಪ್ರಭಾಕರ್ ಕೆಡದ

ಮಲ್ಲಿಕಾರ್ಜುನ ಎಸ ದೇಗಿನಳ ಹಡಪದ ಮಹಾಂತೇಶ್ ಹಂಜಗಿ ಎಸ್ ದೇಗಿನಾಳ ಎಸ್ ಎಸ್ ಸೋಮನ ಕಟ್ಟಿ ಪ್ರಶಾಂತ್ ಮುಂಜಾನೆ ಶೇಖರ್ ಗೌಡ ಪಾಟೀಲ ಬಸಮ್ಮ ಪಡಿಶೆಟ್ಟಿ ಕಸ್ತೂರಿ ಕಪ್ಪನ್ನವರ್ ಶೋಭಾ ರೇವರ ಕರ ಸಾವಿತ್ರಿ ಅರಸಿನಾಳ ಕಮಲವ್ವ ಸಜ್ಜನ ಯಮುನಕ್ಕ ಸಜ್ಜನ ಶಾಂತ ಬಸರಕೋಡ ಯಮುನಕ್ಕ ಅಂಬಳ ನೂರ ಸಾವಿರಾರು ಬಸವ ಭಕ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು

# ಪದವಿಯಿಂದಲ್ಲ ಕೌಶಲ್ಯದಿಂದ ಉದ್ಯೋಗ ಸೃಷ್ಟಿ: ರಾಠೋಡ್

**ಬಾಗಲಕೋಟೆ:**ಇತ್ತೀಚಿನದಿನದಲ್ಲಿ ಉದ್ಯೋಗ ಕ್ಷೇತ್ರದಲ್ಲಿ ಕೌಶಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಉದ್ಯೋಗದಾತರು ಕೌಶಲ್ಯನಿರತ ಉದ್ಯೋಗಿಗಳ ಆಕಾಂಕ್ಷೆಯಲ್ಲಿ ಇರುವುದರಿಂದ ನಮ್ಮ ಪದವಿಯಿಂದಲ್ಲ ಕೌಶಲ್ಯದಿಂದ ಉದ್ಯೋಗ ಸೃಷ್ಟಿಯಾಗುತ್ತಿವೆ ಎಂದು ಅಗಸ್ತ್ಯ ಫೌಂಡೇಶನ್ ವಿಜಯಪುರ ವಿಭಾಗದ ಕ್ಯಾಟಲೈಝುರ್ ದಿನೇಶ್ ರಾಠೋಡ್ ಹೇಳಿದರು.

ನಗರದಬಿವಿವಿಸಂಘದಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಅಗಸ್ತ್ಯ ಫೌಂಡೇಶನ್, ಮಹಾವಿದ್ಯಾಲಯದ ಪ್ಲೇಸ್ಮೆಂಟ್ ಸೆಲ್, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಕಂಪ್ಯೂಟರ್ ಅಪ್ಲಿಕೇಶನ್ ವಿಭಾಗಗಳ ಸಹಯೋಗದಲ್ಲಿ ಹಮ್ಮಿಕೊಂಡ ಸೃಜನಾತ್ಮಕ ಕೌಶಲ್ಯ ತರಬೇತಿ ಕುರಿತು ಮೂರು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ನಾವೆಲ್ಲರೂ ತಂತ್ರಜ್ಞಾನದ ಜೊತೆಗೆ ಸಾಗಬೇಕಾಗಿದೆ. ಎಐ ಎಲ್ಲ ಕ್ಷೇತ್ರದಲ್ಲಿಯೂ ಪ್ರಭಾವ ಬೀರುತ್ತಿದ್ದು ಅದರೊಂದಿಗೆ



ಹೊಂದಿಕೊಳ್ಳುವುದು ಅವಶ್ಯಕ. ಪದವಿ ಮತ್ತು ಅಂಕಪಟ್ಟಿಗಳನ್ನು ಬದಿಗಿಟ್ಟು ಕೌಶಲ್ಯವನ್ನು ಅರಿಸುವ ದಿನಮಾನಗಳು ಹತ್ತಿರವಾಗಿದ್ದು ಬೇರೆ ಬೇರೆ ಕೌಶಲ್ಯಗಳಲ್ಲಿ ಪರಿಣಿತರಾಗಬೇಕು ಅದಕ್ಕಾಗಿ ನಿರಂತರ ಪ್ರಯತ್ನ ಮತ್ತು ಅಭ್ಯಾಸ ಅವಶ್ಯಕ ಎಂದರು.

ಪ್ರತಿಯೊಬ್ಬರ ಬಳಿಯೂ ವಿವಿಧ ಕೌಶಲ್ಯಗಳಿದ್ದು ಅವುಗಳನ್ನು ಹೊರಹಾಕುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಅಗಸ್ತ್ಯ ಫೌಂಡೇಶನ್ ವತಿಯಿಂದ ಹಮ್ಮಿಕೊಂಡ ಮೂರ ದಿನಗಳ ವಿಶೇಷ ತರಬೇತಿಯಲ್ಲಿ ಅತ್ಯುತ್ತಮವಾಗಿ ಭಾಗವಹಿಸಿದ ವಿದ್ಯಾರ್ಥಿಗಳನ್ನು ಬೂಟ್ ಕ್ಯಾಂಪ್ ಗೆ ಆಯ್ಕೆ ಮಾಡಿ ವಿಶೇಷ ತರಬೇತಿ ನೀಡಲಾಗುವುದು. ಕೌಶಲ್ಯ ಇದ್ದರೆ ಉದ್ಯೋಗವೇ ನಿಮ್ಮನರಸಿಬರುತ್ತದೆ.ನಾವುಎಲ್ಲ–ರಿಗಿಂತಲೂ ವಿಶಿಷ್ಟವಾಗಿರಬೇಕು. ಆಗ ನಮ್ಮಲ್ಲಿರುವ ಜ್ಞಾನವನ್ನು ಚಿಮ್ಮಿಸಲು ಸಾಧ್ಯ. ಶ್ರದ್ದೆ, ಪ್ರಯತ್ನದಿಂದ ಕೌಶಲ್ಯಾಭಿವೃದ್ಧಿ ಎಂದು ವಿದ್ಯಾರ್ಥಿಗಳಿಗೆ ಶ್ಲಾಘಿ–ಸಿದರು. ಅತಿಥಿಸ್ಥಾನ ವಹಿಸಿದ ಪ್ರಾಚಾರ್ಯರಾದ ಎಸ್.ಆರ್. ಮೂಗನೂರಮಠ ಅವರು ಮಾತನಾಡಿ ಪ್ರತಿಯೊಬ್ಬರೂ ಸಂವಹನ ಮತ್ತು ಎಐ ಬಳಸಿಕೊಂಡುಕೆಲಸಮಾಡಬೇಕು. ಎಐಯಿಂದ ವಿಷಯವನ್ನು ಉತ್ತಮವಾಗಿ ನಿರೂಪಿಸಲು ಸಹಾಯಕ. ಸಮುದಾಯದ ಅಗತ್ಯತೆಯನ್ನು ಪೂರೈಸುತ್ತದೆ. ಉದ್ಯೋಗ ಮಾರುಕಟ್ಟೆಯಲ್ಲಿ ಗಟ್ಟಿಯಾಗಿ ನಿಲ್ಲಿಸುತ್ತದೆ. ಅಂತರ್ ಕೌಶಲ್ಯ, ಸಾಮರ್ಥ್ಯವನ್ನು ಅನಾವರಣಗೊಳಿಸಲು ಎಐ ಸಹಕಾರಿ. ಜೊತೆಗೆ ಕಡಿಮೆ ಸಮಯದಲ್ಲಿ ಸಮಸ್ಯೆಯನ್ನು ಬಗೆಹರಿಸುತ್ತದೆ. ಇದನ್ನು ಸಮರ್ಥವಾಗಿ ಬಳಸಿಕೊಂಡರೆ ನಿಮ್ಮಲ್ಲಿರುವ ಹೊಳಪು ಹೆಚ್ಚುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪ್ಲೇಸ್ಮೆಂಟ್ ಸೆಲ್ ಮುಖ್ಯಸ್ಥರಾದ ಎಸ್.ವಿ. ಕಟ್ಟಿ ಅವರು ಪ್ರಾಸ್ತವಿಕವಾಗಿ ಮಾತನಾಡಿದರು. ಐಕ್ಯೂಎಸಿ ಸಂಯೋಜಕರಾದ ಡಾ.ಎ.ಯು. ರಾಠೋಡ್, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಐ.ಬಿ. ಚಿಕ್ಕಮಠ, ಕಾರ್ಯಕ್ರಮ ಸಂಂ–ಯೋಜಕರಾದ ಮಹಾಂತೇಶ ಪಿ.ದೊಡವಾಡ ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಡಾ.ಖಮರ್ ಉಲ್ ಇಸ್ಲಾಂ ಸ್ಮರಣಾರ್ಥ ಉಚಿತ ಆರೋಗ್ಯ ಶಿಬಿರ



**ಕಲಬುರಗಿ:** ಮಾಜಿ ಸಚಿವ ಡಾ.ಖಮರ್ ಉಲ್ ಇಸ್ಲಾಂ ಅವರ ಸ್ಮರಣಾರ್ಥವಾಗಿ ಏಷ್ಯನ್ ಆಸ್ಪತ್ರೆಯಿಂದ ಉಚಿತ ಬೃಹತ್ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿತ್ತು, ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಂದ ನೂರಾರು ಜನರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕೆಎಸ್‌ಐಸಿ ಅಧ್ಯಕ್ಷೆ ಮತ್ತು ಕಲಬುರಗಿ ಉತ್ತರ ಶಾಸಕಿ ಕನೀಜ್ ಫಾತಿಮಾ, ಗೌರವ ಅತಿಥಿಗಳಾಗಿ ಕೆಪಿಸಿಸಿ ಸದಸ್ಯ ಫರಾಜ್ ಉಲ್ ಇಸ್ಲಾಂ ಭಾಗವಹಿಸಿದ್ದರು. ಡಾ.ಖಮರ್ ಉಲ್ ಇಸ್ಲಾಂ ಅವರು ಜನರಿಗೆ ನೀಡಿದ ಸೇವೆಯ ಅರ್ಥಪೂರ್ಣ ಮುಂದುವರಿಕೆಯಾಗಿ ಇಬ್ಬರೂ ಗಣ್ಯರು ಈ ಉಪಕ್ರಮವನ್ನು ಶ್ಲಾಘಿಸಿದರು.

ಆರೋಗ್ಯ ಶಿಬಿರವು ಉಚಿತ ವೈದ್ಯಕೀಯ ಸಮಾಲೋಚನೆಗಳು, ಬಹು ವಿಶೇಷತೆಗಳಲ್ಲಿ ಸಾಮಾನ್ಯ ಆರೋಗ್ಯ ತಪಾಸಣೆಗಳು ಮತ್ತು ಸಾಮಾನ್ಯ ಔಷಧವನ್ನು ನೀಡಿತು. ಪ್ರತಿಯೊಬ್ಬ ಸಂದರ್ಶಕರಿಗೂ ಸರಿಯಾದ ಆರೈಕೆ ಮತ್ತು ಮಾರ್ಗದರ್ಶನ ದೊರೆಯುವುದನ್ನು ಖಚಿತಪಡಿಸಿಕೊಳ್ಳಲು ಏಷ್ಯನ್ ಆಸ್ಪತ್ರೆಯ ವೈದ್ಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿಯ ತಂಡಗಳು ತಮ್ಮ ಸಮಯ ಮತ್ತು ಪರಿಣತಿಯನ್ನು ಮೀಸಲಿಟ್ಟವು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕಿ ಕನೀಜ್ ಫಾತಿಮಾ ಅವರು ಈ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ಏಷ್ಯನ್ ಆಸ್ಪತ್ರೆಯನ್ನು ಶ್ಲಾಘಿಸಿದರು ಮತ್ತು ಎಲ್ಲರಿಗೂ ಸುಲಭವಾಗಿ ಸಿಗುವ ಆರೋಗ್ಯ ಸೇವೆಯ ಮಹತ್ವವನ್ನು ಒತ್ತಿ ಹೇಳಿದರು. ದಿವಂಗತ ಡಾ. ಖಮರ್ ಉಲ್ ಇಸ್ಲಾಂ ಅವರು ಯಾವಾಗಲೂ ಸಾರ್ವಜನಿಕ ಕಲ್ಯಾಣ ಮತ್ತು ಸಮುದಾಯದ ಉನ್ನತಿಗಾಗಿ ಶ್ರಮಿಸುತ್ತಿದ್ದರು, ಈ ಉಪಕ್ರಮವು ಅವರ ಸ್ಮರಣಾರ್ಥ ಸೂಕ್ತವಾದ ಗೌರವವಾಗಿದೆ ಎಂದು ಅವರು ಹೇಳಿದರು.

ಕೆಪಿಸಿಸಿ ಸದಸ್ಯ ಜನಾಬ್ ಫರಾಜ್ ಉಲ್ ಇಸ್ಲಾಂ ಅವರು

ವೈದ್ಯಕೀಯ ವೃತ್ತಿಪರರು ಮತ್ತು ಸ್ವಯಂಸೇವಕರಿಗೆ ಕೃತಜ್ಞತೆ ಸಲ್ಲಿಸಿದರು, ಅಂತಹ ಪ್ರಯತ್ನಗಳು ಅವರ ದಿವಂಗತ ತಂದೆ ಪ್ರತಿಪಾದಿಸಿದ ಸಹಾನುಭೂತಿ ಮತ್ತು ಸಾಮಾಜಿಕ ಜವಾಬ್ದಾರಿಯ ಮೌಲ್ಯಗಳನ್ನು ಬಲಪಡಿಸುತ್ತವೆ ಎಂದು ಎತ್ತಿ ತೋರಿಸಿದರು.

ಶಿಬಿರವು ನಿವಾಸಿಗಳಿಂದ, ವಿಶೇಷವಾಗಿ ಹಿಂದುಳಿದ ವರ್ಗಗಳಿಂದ ಅಗಾಧ ಪ್ರತಿಕ್ರಿಯೆಯನ್ನು ಕಂಡಿತು, ಅವರು ಉಚಿತವಾಗಿ ಒದಗಿಸಲಾದ ವ್ಯಾಪಕ ಶ್ರೇಣಿಯ ವೈದ್ಯಕೀಯ ಸೇವೆಗಳಿಂದ ಪ್ರಯೋಜನ ಪಡೆದರು.

ಏಷ್ಯನ್ ಆಸ್ಪತ್ರೆಯ ಆಡಳಿತ ಮಂಡಳಿಯು ಭವಿಷ್ಯದಲ್ಲಿ ಇಂತಹ ಆರೋಗ್ಯ ಶಿಬಿರಗಳನ್ನು ನಿಯಮಿತ ವೈಶಿಷ್ಟ್ಯವನ್ನಾಗಿ ಮಾಡಲು ಉದ್ದೇಶಿಸಿದೆ, ಸಮುದಾಯಕ್ಕೆ ನಿರಂತರ ಬೆಂಬಲವನ್ನು ಖಚಿತಪಡಿಸುತ್ತದೆ ಮತ್ತು ದಿವಂಗತ ಡಾ.ಖಮರ್ ಉಲ್ ಇಸ್ಲಾಂ ಅವರ ದೃಷ್ಟಿಕೋನ ಜೀವಂತವಾಗಿರಿಸುತ್ತದೆ ಎಂದು ಆಸ್ಪತ್ರೆಯ ವ್ಯವಸ್ಥಾಪಕರು ತಿಳಿಸಿದರು.

# ‘ರಾಜ್ಯೋತ್ಸವ ರತ್ನ’ ಪ್ರಶಸ್ತಿಗೆ ಜನವಾಡಕರ, ಕುಚಬಾಳ, ದಂಡಿನ ಸೇರಿದಂತೆ 22 ಜನರ ಆಯ್ಕೆ

**ಬೀದರ :** ಪ್ರಗತಿಪರ ಸಾಹಿತಿಗಳಾದ ಎಂ. ಎಸ್. ಜನವಾಡಕರ, ಎಸ್. ಬಿ. ಕುಚಬಾಳ, ಅಶ್ವಜೀತ ದಂಡಿನ ಸೇರಿದಂತೆ ಒಟ್ಟು 22 ಜನರನ್ನು ‘ರಾಜ್ಯೋತ್ಸವ ರತ್ನ’ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ವಿಶ್ವ ಕನ್ನಡಿಗರ ಸಂಸ್ಥೆಯ ರಾಜ್ಯಾಧ್ಯಕ್ಷರಾದ ಡಾ. ಸುಬ್ಬಣ್ಣ ಕರಕನಳ್ಳಿ ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಕರ್ನಾಟಕ ರಾಜ್ಯೋತ್ಸವ ನಿಮಿತ್ಯ ವಿಶ್ವ ಕನ್ನಡಿಗರ ಸಂಸ್ಥೆಯಿಂದ ಕೊಡಮಾಡುವ ‘ಕರ್ನಾಟಕ ರಾಜ್ಯೋತ್ಸವ ರತ್ನ’ ಪ್ರಶಸ್ತಿ ಪ್ರಕಟಿಸಲಾಗಿದೆ. ನವೆಂಬರ್ ಕೊನೆಯ ವಾರದಲ್ಲಿ ಅತ್ಯಂತ ವೈಭವದಿಂದ ಬೀದರ ನಗರದಲ್ಲಿ ನಡೆಯಲಿರುವ ಎಪ್ಪತ್ತನೇ ಕರ್ನಾಟಕ ರಾಜ್ಯೋತ್ಸವ, ಗಡಿ ಭಾಗದ ಕನ್ನಡಿಗರ ಸಾಹಿತ್ಯ ಸಾಂಸ್ಕೃತಿಕ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಗಣ್ಯರ ಉಪಸ್ಥಿತಿಯಲ್ಲಿ ಪ್ರಶಸ್ತಿ ಪ್ರದಾನಗೊಳ್ಳಲಿದೆ. ಇದು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಸಾಧಕರನ್ನು ಗೌರವಿಸುವ ಉದ್ದೇಶವನ್ನು ಹೊಂದಿದೆ ಎಂದು ಸಂಸ್ಥೆಯ ರಾಜ್ಯಾಧ್ಯಕ್ಷರಾದ ಡಾ. ಸುಬ್ಬಣ್ಣ ಕರಕನಳ್ಳಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

**ಬಾಗಲಕೋಟೆ :** ಬಾದಾಮಿ ತಾಲೂಕಿನ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ 2025–26ನೇ ಸಾಲಿನ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ ನಿಯಮಿತ ಯೋಜನೆಯಡಿ ಗ್ರಾಮೀಣ ರೈತ ಮಹಿಳೆಯರಿಗೆ 5 ವಾರದ ಕೋಳಿ ಮರಿಗಳನ್ನು ಉಚಿತವಾಗಿ ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಹತ್ತಿರದ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಅಥವಾ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ), ಪಶು ಆಸ್ಪತ್ರೆ ಬಾದಾಮಿ ಇವರಿಂದ ಅರ್ಜಿ ನಮೂನೆ ಪಡೆದು ನವೆಂಬರ್ 10ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಬಾಗಲಕೋಟೆ :** ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಬಾಗಲಕೋಟೆ ಜಿಲ್ಲೆಯ ತಾಲೂಕುಗಳಿಗೆ 2 ಹೆಚ್.ಪಿ. ಸಾಮರ್ಥ್ಯದ ಮೇವು ಕತ್ತರಿಸುವ ಯಂತ್ರಗಳು ಹಾಗೂ ರಬ್ಬರ್ ನೆಲ ಹಾಸುಗಳು ಸರಬರಾಜಾಗುತ್ತಿದ್ದು, ನಿಗದಿತ ದರದಲ್ಲಿ ಸರ್ಕಾರದಿಂದ 50% ಸಹಾಯಧನ ಹಾಗೂ ಫಲಾನುಭವಿ ವಂತಿಕೆ 50% ರಂತೆ ಲಭ್ಯವಿರುತ್ತದೆ. ಆಸಕ್ತ ರೈತರು ತಮ್ಮ ತಾಲೂಕಿನಲ್ಲಿರುವ ಪಶು ಆಸ್ಪತ್ರೆಗೆ ಭೇಟಿ ನೀಡಿ, ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಇವರನ್ನು ಸಂಪರ್ಕಿಸಿ ನಿಗದಿತ ನಮೂನೆಯ ಅರ್ಜಿಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ನವೆಂಬರ್ 10 ರೊಳಗಾಗಿ ಸಲ್ಲಿಸುವಂತೆ ಕೋರಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State